

ಕರ್ನಾಟಕ ಸರ್ಕಾರ

ಗಣಿತ

ಅಭ್ಯಾಸ ಸಹಿತ ಪಠ್ಯಪುಸ್ತಕ

(ಪರಿಷ್ಕೃತ)

ಕನ್ನಡ ಮಾಧ್ಯಮ



@KTBS
NOT TO BE REPUBLISHED

ಎರಡನೆಯ ತರಗತಿ

ಭಾಗ – 2

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

ಪರಿವಿಡಿ

C9D3G2

ಕ್ರ.ಸಂ	ಪಾಠದ ಹೆಸರು	ಪುಟ ಸಂಖ್ಯೆ
7.	ಮಾನಸಿಕ ಲೆಕ್ಕಾಚಾರ	1-7
8.	ಹಣ	8-25
	ಅಳತೆಗಳು	
9.	ಉದ್ದ	26-44
10.	ತೂಕ	45-49
11.	ಕಾಲ	50-67
12.	ದತ್ತಾಂಶಗಳ ನಿರ್ವಹಣೆ	68-76
13.	ವಿನ್ಯಾಸಗಳು	77-102

@KTBS NOT TO BE REPUBLISHED

ಪಾಠ - 7

ಮಾನಸಿಕ ಲೆಕ್ಕಾಚಾರ


N8U5P4

ಈ ಪಾಠವನ್ನು ಕಲಿತ ನಂತರ ನೀನು,

* ಒಂದಂಕಿ ಸಂಖ್ಯೆಗಳನ್ನು ಮಾನಸಿಕವಾಗಿ ಕೂಡುವೆ ಮತ್ತು ಕಳೆಯುವೆ.
* ಹತ್ತರ ಗುಣಕಗಳನ್ನು ಮಾನಸಿಕವಾಗಿ ಕೂಡುವೆ ಮತ್ತು ಕಳೆಯುವೆ.

ಸಂಕಲನ

ಉದಾಹರಣೆ 1 :



ಸಲ್ಮಾನ್ ಎಲ್ಲರಿಗಿಂತ ವೇಗವಾಗಿ ಲೆಕ್ಕ ಮಾಡಿದ್ದಾನೆ.

ಉದಾಹರಣೆ 2 :


3 + 8 = ?



ಡಿಸೋಜ ಲೆಕ್ಕವನ್ನು ಬೇಗ ಬಿಡಿಸಿದ್ದಾನೆ.

© KTBS NOT TO BE REPUBLISHED

ಉದಾಹರಣೆ ೩ :




7 + 6 = ?

ಈಗ ಗೌರಿ ಲೆಕ್ಕವನ್ನು ಬೇಗ ಬಿಡಿಸಿದ್ದಾಳೆ.

ಈ ಲೆಕ್ಕಗಳನ್ನು ಮಾನಸಿಕವಾಗಿ ಬಿಡಿಸು.

1) 6+2	5) 8+5	9) 7+3
2) 8+4	6) 9+2	10) 9+8
3) 5+5	7) 2+8	11) 4+6
4) 3+9	8) 5+0	12) 7+9

ಈ ಪಟ್ಟಿಗಳಲ್ಲಿ ಬಿಟ್ಟ ಸಂಖ್ಯೆಯನ್ನು ಬರೆ.




@KTBS NOT TO BE REPUBLISHED

ವ್ಯವಕಲನ (ಮಾನಸಿಕ)

ಉದಾಹರಣೆ 1 :

8 - 5 = ?



ಈ ಲೆಕ್ಕವನ್ನು ಮಾನಸಿಕವಾಗಿ ವೇಗವಾಗಿ ಮಾಡಲು ಯಾವ ಕ್ರಮ ಅನುಕೂಲ. ಅದನ್ನು ನೀನೇ ತಿಳಿದು ಅಭ್ಯಾಸ ಮಾಡು.

ಉದಾಹರಣೆ 2 :

6 - 2 = ? **7 - 4 = ?** **9 - 6 = ?**




@KTBS NOT TO BE REPUBLISHED

ಲೆಕ್ಕಗಳನ್ನು ಮಾನಸಿಕವಾಗಿ ಬಿಡಿಸು.

1) 5 - 3	5) 9 - 6	9) 6 - 1
2) 3 - 3	6) 7 - 3	10) 8 - 7
3) 5 - 2	7) 8 - 6	11) 9 - 2
4) 8 - 2	8) 6 - 6	12) 5 - 0


ಈ ಪಟ್ಟಿಯಲ್ಲಿ ಬಿಟ್ಟ ಸಂಖ್ಯೆಯನ್ನು ಬರೆ.



@KTBS NOT TO BE REPUBLISHED

ಹತ್ತರ ಗುಣಕಗಳ ಸಂಕಲನ ಮತ್ತು ವ್ಯವಕಲನ (ಮಾನಸಿಕ)

ಚಟುವಟಿಕೆ : "ಶತಾಯುಷಿ" ಆಟ



ಮಕ್ಕಳು ವೃತ್ತಾಕಾರದಲ್ಲಿ ಕುಳಿತಿರುವರು. ಒಬ್ಬರು 10 ಎಂದು ಹೇಳಿ ಆಟ ಪ್ರಾರಂಭಿಸುವರು. ಅವರ ಪಕ್ಕದವರು ಅದಕ್ಕೆ 10 ನ್ನು ಸೇರಿಸಿ 20 ಎನ್ನುವರು. ಅವರ ನಂತರ ಇರುವವರು ಕ್ರಮವಾಗಿ 10 ಸೇರಿಸುತ್ತಾ ಸಂಖ್ಯೆ ಹೇಳುವರು (30.....40 ..... 50 .....).ಈ ಕ್ರಮದಲ್ಲಿ ಯಾರು '100' ಹೇಳುತ್ತಾರೋ ಅವರು 'ಶತಾಯುಷಿ'. ಶತಾಯುಷಿ ಆದವರು ಆಟದಿಂದ ಹೊರ ನಡೆಯುವರು. ಅವರ ಪಕ್ಕದಲ್ಲಿದ್ದವರು ಪುನ: 'ಹತ್ತು' ಹೇಳುವರು, ಹೀಗೆ ಆಟ ಮುಂದುವರಿಯುವುದು.




© KTBS NOT TO BE REPUBLISHED

ಮಾನಸಿಕವಾಗಿ ಕೂಡು.


10 + 10	50 + 10	60 + 10
20 + 10	80 + 10	10 + 50
30 + 10	40 + 10	10 + 70

ಉದಾಹರಣೆ 1 :



50 + 40 = 90

ಉದಾಹರಣೆ 2 :



© KTBS NOT TO BE REPUBLISHED

ಇವುಗಳನ್ನು ಮಾನಸಿಕವಾಗಿ ಕೂಡಿ ಉತ್ತರ ಹೇಳು :


1) 40 + 20 2) 50 + 30 3) 20 + 70

4) 30 + 40 5) 80 + 10 6) 20 + 50


7) 60 + 30 8) 70 + 10

ವ್ಯವಕಲನ

ಉದಾಹರಣೆ 1 :



ಉದಾಹರಣೆ 2 :



©KTBS NOT TO BE REPUBLISHED

ಈ ಲೆಕ್ಕಗಳನ್ನು ಮಾನಸಿಕವಾಗಿ ಬಿಡಿಸಿ ಉತ್ತರ ಹೇಳು.

1) 20 - 10 2) 50 - 20 3) 60 - 40 4) 70 - 10

5) 60 - 30 6) 70 - 30 7) 90 - 50 8) 80 - 80

ಪಾಠ - 8

ಹಣ

Y2E1H9

ಈ ಪಾಠವನ್ನು ಕಲಿತ ನಂತರ ನೀನು,

- ವಿವಿಧ ನೋಟುಗಳು ಮತ್ತು ನಾಣ್ಯಗಳನ್ನು ಗುರುತಿಸುವೆ.
- ₹ 50 ನ್ನು ಮೀರದಂತೆ, ಹಣದ ಪರಿಮಾಣಗಳನ್ನು ಒಟ್ಟು ಗೂಡಿಸುವೆ.
- ಸಣ್ಣ ಪರಿಮಾಣದ ಹಣವನ್ನು ಮಾನಸಿಕವಾಗಿ ಕೂಡುವೆ ಮತ್ತು ಕಳೆಯುವೆ.
- 3 ರಿಂದ 4 ನೋಟುಗಳನ್ನು ಬಳಸಿ ಹಣದ ವ್ಯವಹಾರ ನಡೆಸುವೆ.

ನಾಣ್ಯಗಳು ಮತ್ತು ನೋಟುಗಳು

ನಾಣ್ಯ ಮತ್ತು ನೋಟಿನ ಮುಖಬೆಲೆ ಅರಿಯುವುದು.

ವಸ್ತುಗಳನ್ನು ಕೊಳ್ಳಲು ನಮಗೆ ಹಣ ಬೇಕಲ್ಲವೆ? ಹೌದು, ನಮಗೆ ಹಣ ಬೇಕು. ಈಗ ಅದರ ಬಗ್ಗೆ ತಿಳಿ.

© KTBS NOT TO BE REPUBLISHED

ಮಕ್ಕಳು ವಿವಿಧ ನೋಟು ಮತ್ತು ನಾಣ್ಯಗಳನ್ನು ಬಳಸಿ ಕೆಳಗಿನ ಚಟುವಟಿಕೆಯನ್ನು ತರಗತಿಯಲ್ಲಿ ಮಾಡುವರು. ಮಕ್ಕಳು ಒಬ್ಬೊಬ್ಬರಾಗಿ ಬಂದು ಮೇಜಿನ ಮೇಲೆ ಜೋಡಿಸಿರುವ ಆಟಿಕೆಯ ಯಾವುದಾದರೂ ಒಂದು ನಾಣ್ಯ ಅಥವಾ ನೋಟನ್ನು ತೆಗೆದುಕೊಂಡು ಚಾರ್ಟಿನ ಮೇಲೆ ಸೂಕ್ತ ಸ್ಥಳದಲ್ಲಿ ಅಂಟಿಸುವರು.

ಹೀಗೆ ಎಲ್ಲಾ ಮಕ್ಕಳು ಈ ಚಟುವಟಿಕೆಯನ್ನು ಮಾಡುವರು.

- ನಾಣ್ಯದ ಮೇಲೆ ತೆಳುವಾದ ಕಾಗದವನ್ನು ಇಡು. ಒಂದು ಕೈಯಿಂದ ಬಿಗಿಯಾಗಿ ಹಿಡಿ. ಪೆನ್ಸಿಲ್ ಅಥವಾ ಕ್ರಯಾನ್ಸ್ ನಿಂದ ಪೇಪರ್ ಮೇಲೆ ಉಜ್ಜು. ಕಾಗದದ ಮೇಲೆ ನಾಣ್ಯದ ಗುರುತು ಮೂಡುತ್ತದೆ. ಹೀಗೆ ಆಟಿಕೆಯ ನಾಣ್ಯಗಳನ್ನು ಸಿದ್ದಪಡಿಸಿಕೊ.
- ಟ್ರೇಸ್ ಮಾಡಿದ ನಾಣ್ಯದ ಚಿತ್ರಗಳನ್ನು ಕತ್ತರಿಸಿ ಚಟುವಟಿಕೆಯಲ್ಲಿ ಬಳಸು.
- ಡ್ರಾಯಿಂಗ್ ಹಾಳೆಯನ್ನು ತೆಗೆದುಕೊಂಡು ವಿವಿಧ ನೋಟುಗಳ ಆಕಾರಕ್ಕೆ ಕತ್ತರಿಸಿಕೊ. ಅವುಗಳ ಮೇಲೆ ಬೆಲೆಯನ್ನು ಬರೆ. ಹೀಗೆ ಆಟಿಕೆಯ ನೋಟುಗಳನ್ನು ಸಿದ್ದಪಡಿಸಿಕೊಂಡು ಚಟುವಟಿಕೆಯಲ್ಲಿ ಬಳಸು.

ಕ್ರಮ ಸಂಖ್ಯೆ	ಮುಖ ಬೆಲೆ	ನಾಣ್ಯ ಮತ್ತು ನೋಟುಗಳ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸಿ
1]	50 ಪೈಸೆ	
2]	2 ರೂಪಾಯಿ	
3]	10 ರೂಪಾಯಿ	
4]	20 ರೂಪಾಯಿ	
5]	1 ರೂಪಾಯಿ	
6]	5 ರೂಪಾಯಿ	
7]	50 ರೂಪಾಯಿ	

@KTBS
NOT TO BE REPUBLISHED

ನಮ್ಮ ಚಲಾವಣೆಯಲ್ಲಿರುವ ನೋಟುಗಳು ಕಾಗದದಿಂದ ಮಾಡಲ್ಪಟ್ಟಿವೆ.

ನಾಣ್ಯಗಳು ಲೋಹದಿಂದ ಮಾಡಲ್ಪಟ್ಟಿವೆ.

ನಾಣ್ಯ ಅಥವಾ ನೋಟಿನ ಬೆಲೆಯನ್ನು ಅವುಗಳ ಮೇಲೆ ಬರೆಯಲಾಗಿದೆ.

ಉದಾಹರಣೆಯಲ್ಲಿ ತೋರಿಸಿದಂತೆ ಕೊಟ್ಟಿರುವ ನಾಣ್ಯ ಮತ್ತು ನೋಟುಗಳ ಚಿತ್ರ ಗುರುತಿಸಿ ಬೆಲೆಯನ್ನು ಬರೆ.

ಉದಾಹರಣೆ:



ಬೆಲೆ [50] ಪೈಸೆ



ಬೆಲೆ [ ] ರೂಪಾಯಿ




ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ




ಬೆಲೆ [ ] ರೂಪಾಯಿ



ಬೆಲೆ [ ] ರೂಪಾಯಿ

@KTBS NOT TO BE REPUBLISHED

ಮಾದರಿಯಂತೆ ಗೆರೆ ಎಳೆದು ಹೊಂದಿಸು.

	ಅ	ಆ
1]		2 ರೂಪಾಯಿ
2]		10 ರೂಪಾಯಿ
3]		50 ರೂಪಾಯಿ
4]		1 ರೂಪಾಯಿ
5]		5 ರೂಪಾಯಿ
6]		20 ರೂಪಾಯಿ

@KTBS NOT TO BE REPUBLISHED

ನಾಣ್ಯಗಳ ಚಿತ್ರ ಮತ್ತು ಅವುಗಳ ಬೆಲೆಗೆ ಗೆರೆ ಎಳೆದು ಹೊಂದಿಸು :–

	ಅ	ಬ
1]		1 ರೂಪಾಯಿ
2]		2 ರೂಪಾಯಿ
3]		5 ರೂಪಾಯಿ
4]		50 ಪೈಸೆ

© DKTBS NOT TO BE REPUBLISHED

ತಿಳಿಯಿರಿ :


1 ರೂಪಾಯಿ, 2 ರೂಪಾಯಿ, 5 ರೂಪಾಯಿ ಮತ್ತು 10 ರೂಪಾಯಿಗಳು ನಾಣ್ಯ ಮತ್ತು ನೋಟು ಎರಡೂ ರೂಪದಲ್ಲಿ ದೊರೆಯುತ್ತವೆ.

ಒಂದು ರೂಪಾಯಿಗೆ ಎಷ್ಟು ಪೈಸೆಗಳು?

1 ರೂಪಾಯಿ = 100 ಪೈಸೆಗಳು

" ₹ " - ಇದು ರೂಪಾಯಿ ಎಂಬುದರ ಸಂಕೇತ.


ಚಾರ್ಟನ್ನು ನೋಡಿ ಕೊಟ್ಟಿರುವ ವಸ್ತುಗಳ ಬೆಲೆಯ ಮೊತ್ತ ಕಂಡು ಹಿಡಿದು ಚೌಕದಲ್ಲಿ ಬರೆ.

ವಸ್ತುಗಳು	ನೋಟುಗಳ ಜೋಡಣೆ	ಮೊತ್ತ
		25 ರೂಪಾಯಿಗಳು
		ರೂಪಾಯಿಗಳು
		ರೂಪಾಯಿಗಳು
		ರೂಪಾಯಿಗಳು
		ರೂಪಾಯಿಗಳು

@KTBS NOT TO BE REPUBLISHED

ಉದಾಹರಣೆಯಲ್ಲಿ ತೋರಿಸಿರುವಂತೆ ₹ 1, ₹ 2 ಮತ್ತು ₹ 5 ರ ನಾಣ್ಯಗಳನ್ನು ಮಾತ್ರ ಬಳಸಿ ₹6 ಮೊತ್ತ ಆಗುವಂತೆ ಜೋಡಿಸು.

ಉದಾಹರಣೆ :



©KTBS
NOT TO BE REPUBLISHED

₹ 10 ಮತ್ತು ₹ 5 ರ ನೋಟು/ನಾಣ್ಯಗಳ ಚಿತ್ರಗಳನ್ನು ಬಳಸಿ ₹ 20 ಆಗುವಂತೆ ಜೋಡಿಸು.

1)

2)

3)

@KTBS
NOT TO BE REPUBLISHED

₹ 20 ಮತ್ತು ₹ 10 ರ ನೋಟುಗಳ ಚಿತ್ರಗಳನ್ನು ಬಳಸಿ ₹ 50 ಆಗುವಂತೆ ಜೋಡಿಸು.

1)

2)

ಕೊಟ್ಟಿರುವ ಮೊತ್ತಕ್ಕೆ ಸರಿಹೊಂದಲು ಸೂಚಿಸಿದ ಬೆಲೆಯ ಎಷ್ಟು ನಾಣ್ಯ ಅಥವಾ ನೋಟುಗಳನ್ನು ಬಳಸುತ್ತೀಯ ಚೌಕದಲ್ಲಿ ಬರೆ

1] ₹ 10 ಆಗಲು ಎಷ್ಟು  ರ ನೋಟುಗಳು ಬೇಕು?

2] ₹ 15 ಆಗಲು ಎಷ್ಟು  ರ ನೋಟುಗಳು ಬೇಕು?

3] ₹ 30 ಆಗಲು ಎಷ್ಟು  ರ ನೋಟುಗಳು ಬೇಕು?

4] ₹ 50 ಆಗಲು ಎಷ್ಟು  ರ ನೋಟುಗಳು ಬೇಕು?

5] ₹ 12 ಆಗಲು ಎಷ್ಟು  ರ ನಾಣ್ಯಗಳು ಬೇಕು?

6] ₹ 40 ಆಗಲು ಎಷ್ಟು  ರ ನೋಟುಗಳು ಬೇಕು?

7] ₹ 40 ಆಗಲು ಎಷ್ಟು  ರ ನೋಟುಗಳು ಬೇಕು?

8] ₹ 5 ಆಗಲು ಎಷ್ಟು  ರ ನಾಣ್ಯಗಳು ಬೇಕು?

NOT TO BE REPUBLISHED @KTBS


ಕೊಟ್ಟಿರುವ ಮೊತ್ತಕ್ಕೆ ಸರಿ ಹೊಂದಲು ಬಳಸಬಹುದಾದ ನೋಟು/ನಾಣ್ಯಗಳ ಬೆಲೆಯನ್ನು ಚೌಕದಲ್ಲಿ ಬರೆ.

	₹ ₹ ₹ ₹
	₹ ₹ ₹
	ಪೈಸೆ ಪೈಸೆ ₹
	ಪೈಸೆ ಪೈಸೆ

@KTBS NOT TO BE REPUBLISHED


ಮಾನಸಿಕವಾಗಿ ಸಣ್ಣ ಮೊತ್ತದ ಹಣವನ್ನು ಕೂಡುವುದು ಮತ್ತು ಕಳೆಯುವುದು.

1




ಅಮ್ಮ ಚಾಕೊಲೇಟು ತೆಗೆದು ಕೊಳ್ಳಲು ಸ್ವಲ್ಪ ಹಣ ಕೊಡು.

2




ಈ ಹಣ ತೆಗೆದುಕೊಂಡು ಚಾಕೊಲೇಟು ಕೊಂಡುಕೋ.

3




ಈಗ ನಿನ್ನ ಬಳಿ ಎಷ್ಟು ಹಣವಿದೆ ?

4




ನನ್ನ ಬಳಿ ₹ 15 ಇದೆ. (5+5+5=15)

5



ಅಂಕಲ್ ಒಂದು ಚಾಕೊಲೇಟಿನ ಬೆಲೆ ಎಷ್ಟು?


6



ಒಂದು ಚಾಕೊಲೇಟಿನ ಬೆಲೆ ₹ 4.


@KTBS NOT TO BE REPUBLISHED

7



ಅಂಕಲ್ ನನಗೆ ೩ ಚಾಕೊಲೇಟುಗಳನ್ನು ಕೊಡಿ.

8



ತೆಗೆದಕೋ ಮೂರು ಚಾಕೊಲೇಟುಗಳನ್ನು.

9




ಚಿಲ್ಲರೆ ತೆಗೆದುಕೋ.

10




ಧನ್ಯವಾದಗಳು ಅಂಕಲ್.

11



ಚಾಕೊಲೇಟು ಕೊಂಡುಕೊಂಡು ಬಂದ್ಯಾ? ಎಷ್ಟು ಹಣ ಉಳಿದಿದೆ?

12



ಹೌದು ಅಮ್ಮ. ನನ್ನ ಬಳಿ ₹ ೩ ಉಳಿದಿದೆ.

ಪುಟ್ಟಿ ಅಂಗಡಿಯವನಿಗೆ ಎಷ್ಟು ಹಣ ನೀಡಿದಳು?

@KTBS NOT TO BE REPUBLISHED

ವಿವಿಧ ನೋಟುಗಳು/ನಾಣ್ಯಗಳ ಜೋಡಣೆ ನೋಡಿ ಬಿಟ್ಟ ಸ್ಥಳದಲ್ಲಿ ಅವುಗಳ ಮೊತ್ತ ಬರೆ.

1) 

₹ 22

2) 

₹

3) 

₹

4) 

₹

5) 

₹

© KTBS NOT TO BE REPUBLISHED

ಕೊಟ್ಟಿರುವ ಮೊತ್ತಕ್ಕೆ ಸರಿ ಹೊಂದುವ ನೋಟು / ನಾಣ್ಯಗಳಿಗೆ ಬಣ್ಣ ತುಂಬು.

ಮೊತ್ತ	ನೋಟುಗಳು / ನಾಣ್ಯಗಳು
₹ 14	₹ 20, ₹ 10, ₹ 2, ₹ 1, ₹ 1, ₹ 2, ₹ 5
₹ 23	₹ 10, ₹ 50, ₹ 2, ₹ 5, ₹ 1, ₹ 5, ₹ 1
₹ 35	₹ 10, ₹ 20, ₹ 10, ₹ 5, ₹ 5, ₹ 5
₹ 50	₹ 20, ₹ 10, ₹ 1, ₹ 2, ₹ 10, ₹ 5, ₹ 2, ₹ 5

@KTBS NOT TO BE REPUBLISHED

ಕೊಟ್ಟಿರುವ ವಸ್ತುಗಳ ಬೆಲೆ ನೋಡಿ ಮೊತ್ತ ಕಂಡು ಹಿಡಿದು, ಅದಕ್ಕೆ ಸರಿ ಹೊಂದುವ ನೋಟು/ನಾಣ್ಯಗಳನ್ನು ಆಯ್ಕೆ ಮಾಡಿ ದುಂಡು ಸುತ್ತು.

ಉದಾಹರಣೆ :–



₹ 10

₹ 30

+

3	0
1	0
4	0

₹ 20 ₹ 10 ₹ 20 ₹ 10 ₹ 50



₹ 5 ₹ 20

+

₹ 20 ₹ 5 ₹ 20 ₹ 10





₹ 2 ₹ 12

+

₹ 5 ₹ 5 ₹ 2 ₹ 1 ₹ 1 ₹ 1





₹ 5


₹ 10

+

₹ 5 ₹ 5 ₹ 1 ₹ 2 ₹ 2 ₹ 2

@KTBS NOT TO BE REPUBLISHED

ಉದಾಹರಣೆಯಲ್ಲಿ ತೋರಿಸಿದಂತೆ ಚಿತ್ರಗಳಿಗೆ ಹಾಕಿರುವ ಬೆಲೆಯ ಫಲಕವನ್ನು ನೋಡಿ ನಿನ್ನ ಬಳಿ ಇದ್ದ ಹಣದಲ್ಲಿ ಖರ್ಚು ಮಾಡಿದ ಹಣ ಮತ್ತು ನಿನ್ನ ಬಳಿ ಉಳಿದ ಹಣವನ್ನು ಸಂಬಂಧಿಸಿದ ಚೌಕದಲ್ಲಿ ಸರಿಯಾಗಿ ತುಂಬು.

ಕ್ರ.ಸಂ	ಖರೀದಿಸಿದ ವಸ್ತುಗಳು	ನಿನ್ನ ಬಳಿ ಇದ್ದ ಹಣ	ನೀನು ಖರ್ಚು ಮಾಡಿದ ಹಣ	ನಿನ್ನ ಬಳಿ ಉಳಿದ ಹಣ
1.	ಉದಾಹರಣೆ :  ₹ 2  ₹ 5	₹ 10	₹ 7	₹ 3
2.	 ₹ 5  ₹ 20	₹ 30	₹ _____	₹ _____
3.	 ₹ 40	₹ 50	₹ _____	₹ _____
4.	 ₹ 10  ₹ 5	₹ 25	₹ _____	₹ _____

@KTBS NOT TO BE REPUBLISHED

3 ರಿಂದ 4 ನೋಟು/ನಾಣ್ಯಗಳನ್ನು ಬಳಸಿ ವ್ಯವಹರಿಸುವುದು.

ತರಗತಿ ಕೋಣೆಯಲ್ಲಿ ವಿವಿಧ ಬೆಲೆಯ ಫಲಕವಿರುವ ವಸ್ತುಗಳಿಂದ ಕೂಡಿದ ಸಣ್ಣ ಅಂಗಡಿಯ ಮಾದರಿ ನಿರ್ಮಿಸಿ.

* ಮಕ್ಕಳಲ್ಲಿ ಒಬ್ಬರು ಅಂಗಡಿ ಮಾಲೀಕನಂತೆ ನಟಿಸಲಿ ಮತ್ತು ಇಬ್ಬರು ಮಕ್ಕಳು ಗ್ರಾಹಕರಂತೆ ನಟಿಸಲಿ.

* ಗ್ರಾಹಕರ ಹತ್ತಿರ ₹ 30 ಇದೆ. ಅವರು ಅಂಗಡಿಯಿಂದ 2 ವಸ್ತುಗಳನ್ನು ಖರೀದಿಸಿ ಅದರ ಬೆಲೆಯನ್ನು ಜೋರಾಗಿ ಹೇಳಲಿ. ಒಬ್ಬರು ಅದನ್ನು ಕಪ್ಪು ಹಲಗೆಯ ಮೇಲೆ ಬರೆಯಲಿ. ಕೊಂಡುಕೊಂಡ ನಂತರ ಅಂಗಡಿಯವನಿಗೆ ಕೊಟ್ಟ ಹಣ ಮತ್ತು ತಮ್ಮಲ್ಲಿ ಉಳಿದ ಹಣವನ್ನು ಜೋರಾಗಿ ಹೇಳಲಿ.

ಇದೇ ಚಟುವಟಿಕೆಯನ್ನು ಎಲ್ಲಾ ಮಕ್ಕಳಿಂದ ಮಾಡಿಸುವುದು.

ಈ ಚಟುವಟಿಕೆಗೆ ಆಟಿಕೆಯ ನೋಟುಗಳನ್ನು ಡ್ರಾಯಿಂಗ್ ಹಾಳೆಯಿಂದ ತಯಾರಿಸಿ ಉಪಯೋಗಿಸು.


@KTBS NOT TO BE REPUBLISHED


₹ 10


₹ 5



₹ 5


₹ 8



₹ 12


₹ 6


₹ 12


₹ 3


₹ 1

ವಸ್ತುಗಳು	ಖರ್ಚು ಮಾಡಿದ ಹಣ	ಉಳಿದ ಹಣ
ಮಾದರಿ :  	6 + 12 _____ 18 _____	30 - 18 _____ 12 _____
 	+ _____ _____	– _____ _____
 	+ _____ _____	– _____ _____
 	+ _____ _____	– _____ _____

@KTBS NOT TO BE REPUBLISHED

ಪಾಠ - 9

L3P4E7


ಉದ್ದ

ಈ ಪಾಠವನ್ನು ಕಲಿತ ನಂತರ ನೀನು,

- ಹತ್ತಿರ–ದೂರ, ತೆಳು–ದಪ್ಪ, ಉದ್ದ/ಎತ್ತರ–ಗಿಡ್ಡ, ಏರು–ತಗ್ಗುಗಳ ನಡುವಿನ ವ್ಯತ್ಯಾಸವನ್ನು ತಿಳಿಯುವೆ.
- ವಸ್ತುಗಳನ್ನು ಅವುಗಳ ಉದ್ದಕ್ಕನುಗುಣವಾಗಿ ಹೋಲಿಸಿ ಅನುಕ್ರಮವಾಗಿ ಜೋಡಿಸುವೆ.
- ಅನೌಪಚಾರಿಕ ಅಳತೆಯ ಮಾನಗಳಿಂದ ಚಿಕ್ಕ ಉದ್ದಗಳನ್ನು ಅಳೆಯುವೆ. [ಉದಾಹರಣೆ: ಗಿಲ್ಲಿದಾಂಡು (ಚಿಣ್ಣಿ ಕೋಲು) ಮತ್ತು ಗೋಲಿಯಾಟ]
- ಉದ್ದವನ್ನು ಅಂದಾಜಿಸುವೆ ಮತ್ತು ಅನೌಪಚಾರಿಕ ಮಾನಗಳನ್ನು ಬಳಸಿ ಪರೀಕ್ಷಿಸುವೆ.

@KTBS NOT TO BE REPUBLISHED

ಹತ್ತಿರ ಮತ್ತು ದೂರ



ಮೇಲಿನ ಚಿತ್ರವನ್ನು ನೋಡು,

1. ಮನೆಯ ಹತ್ತಿರ ಯಾರಿದ್ದಾರೆ ?

ಮನೆಯ ಹತ್ತಿರ ಹುಡುಗಿಯಿದ್ದಾಳೆ.

2. ಮನೆಯಿಂದ ದೂರದಲ್ಲಿ ಯಾರಿದ್ದಾರೆ?

ಮನೆಯಿಂದ ದೂರದಲ್ಲಿ ಹುಡುಗನಿದ್ದಾನೆ.

3. ಮರದ ಹತ್ತಿರ ಯಾರಿದ್ದಾರೆ?


ಮರದ ಹತ್ತಿರ ಹುಡುಗನಿದ್ದಾನೆ.

4. ಮರದಿಂದ ದೂರದಲ್ಲಿ ಯಾರಿದ್ದಾರೆ?

ಮರದಿಂದ ದೂರದಲ್ಲಿ ಹುಡುಗಿಯಿದ್ದಾಳೆ.

ಯಾವುದು ಹತ್ತಿರ ? ಯಾವುದು ದೂರ?

ಚಿತ್ರವನ್ನು ನೋಡಿ, ಮರಕ್ಕೆ ಹತ್ತಿರದಲ್ಲಿರುವ ಪ್ರಾಣಿಗೆ '✔' ಗುರುತು ಹಾಕು.




©KTBS NOT TO BE REPUBLISHED

2. ಚಿತ್ರವನ್ನು ನೋಡು. ಕಪ್ಪುಹಲಗೆಯಿಂದ ದೂರದಲ್ಲಿರುವವರಿಗೆ ವೃತ್ತ ಹಾಕಿ ತೋರಿಸು.



3. ಈ ಚಿತ್ರವನ್ನು ನೋಡಿ ಉತ್ತರಿಸು.



1) ಮುಕ್ತಾಯದ ಗೆರೆಯ ಹತ್ತಿರದಲ್ಲಿರುವ ಹುಡುಗಿ ಯಾರು? _____

2) ಮುಕ್ತಾಯದ ಗೆರೆಯಿಂದ ದೂರದಲ್ಲಿರುವ ಹುಡುಗಿ ಯಾರು? _____

@KTBS NOT TO BE REPUBLISHED

ತೆಳು–ದಪ್ಪ


ಕೆಳಗಿನ ಜೋಡಿ ಚಿತ್ರಗಳನ್ನು ಗಮನಿಸಿ, ಅವುಗಳಲ್ಲಿ ಯಾವುದು ದಪ್ಪ, ಯಾವುದು ತೆಳು? ಎಂದು ಗುರುತಿಸಿ ಬರೆ.



ತೆಳು



ದಪ್ಪ















@KTBS
NOT TO BE REPUBLISHED

ತೆಳು ವಸ್ತುವಿಗೆ '✔' ಗುರುತು ಹಾಕು.










ದಪ್ಪ ವಸ್ತುವಿಗೆ '✔' ಗುರುತು ಹಾಕು.









@KTBS NOT TO BE REPUBLISHED

ಉದ್ದ–ಗಿಡ್ಡ

ಕೆಳಗಿನ ಚಿತ್ರಗಳನ್ನು ಗಮನಿಸಿ, ಉದ್ದವಿರುವುದನ್ನು ಗುರುತಿಸಿ, '✔' ಗುರುತು ಹಾಕು.


















@KTBS
NOT TO BE REPUBLISHED

ಕೆಳಗಿನ ಜೋಡಿ ಚಿತ್ರಗಳಲ್ಲಿ ಉದ್ದವಿರುವುದಕ್ಕೆ 'ಉದ್ದ' ಎಂದು, ಗಿಡ್ಡವಿರುವುದಕ್ಕೆ 'ಗಿಡ್ಡ' ಎಂದೂ ಕೊಟ್ಟಿರುವ ಚೌಕದಲ್ಲಿ ಬರೆ.





















@KTBS
NOT TO BE REPUBLISHED

ಎತ್ತರ ಮತ್ತು ಗಿಡ್ಡ

ಚಿತ್ರಗಳನ್ನು ಗಮನಿಸು ಎತ್ತರದ ವಸ್ತುಗಳಿಗೆ 'ಎತ್ತರ' ಎಂದು, ಗಿಡ್ಡವಾದ ವಸ್ತುಗಳಿಗೆ 'ಗಿಡ್ಡ' ಎಂದೂ ಕೊಟ್ಟಿರುವ ಚೌಕಗಳಲ್ಲಿ ಬರೆ.














@KTBS NOT TO BE REPUBLISHED






ಎತ್ತರವಾಗಿರುವುದಕ್ಕೆ ‘✔’ ಗುರುತು ಹಾಕು.



NOT TO BE REPUBLISHED ©KTBS





ಗಿಡ್ಡವಾಗಿರುವುದಕ್ಕೆ '✓' ಗುರುತು ಹಾಕು.









@KTBS NOT TO BE REPUBLISHED

ಸರಿಯಾಗಿದ್ದಲ್ಲಿ '✓' ಎಂದೂ, ತಪ್ಪಿದ್ದಲ್ಲಿ '✗' ಎಂದೂ ಗುರುತು ಮಾಡು.

1. ಜಿರಾಫೆಯು ಇಲಿಗಿಂತ ಎತ್ತರವಾಗಿದೆ.
2. ನಿನ್ನ ತಾಯಿಯು ನಿನಗಿಂತ ಗಿಡ್ಡವಾಗಿದ್ದಾರೆ.
3. ಹುಣಸೆ ಮರವು ಗುಲಾಬಿ ಗಿಡಕ್ಕಿಂತ ಗಿಡ್ಡವಾಗಿದೆ.
4. ದನವು ಕೋಳಿಗಿಂತ ಎತ್ತರವಾಗಿದೆ.

ಎತ್ತರ – ತಗ್ಗು (ಮೇಲೆ–ಕೆಳಗೆ)

ಕೆಳಗಿನ ಚಿತ್ರವನ್ನು ಗಮನಿಸು. ಗಿರಿಜ ಮತ್ತು ಅಂಬುಜ ಕಟ್ಟಡದ ಬೇರೆ ಬೇರೆ ಸ್ಥಳಗಳಲ್ಲಿ ನಿಂತಿದ್ದಾರೆ.



- ಯಾರು ಎತ್ತರದಲ್ಲಿ ನಿಂತಿದ್ದಾರೆ?
- ಯಾರು ತಗ್ಗಿನಲ್ಲಿ ನಿಂತಿದ್ದಾರೆ?

©KTBS NOT TO BE REPUBLISHED


1. ಎತ್ತರದಲ್ಲಿರುವ ವಸ್ತುವಿಗೆ '✔'ಹಾಕು



2. ತಗ್ಗಿನಲ್ಲಿರುವುದಕ್ಕೆ '✔'ಗುರುತು ಹಾಕು.



3.



ಈ ಎರಡು ನೀರಿನ ಕ್ಯಾನುಗಳನ್ನು ಗಮನಿಸು.

ನೀರಿನ ಮಟ್ಟ ಎತ್ತರದಲ್ಲಿರುವ ನೀರಿನ ಕ್ಯಾನಿಗೆ '✔' ಗುರುತು ಹಾಕು.

©KTBS NOT TO BE REPUBLISHED


ಅನೌಪಚಾರಿಕ ಅಳತೆಯ ಮಾನಗಳು.



1– ಪಾದ



1– ಗೇಣು



1– ಮೊಳ



4– ಬೆರಳು



1– ಹೆಜ್ಜೆ



1– ಮಾರು

ನೀನು ಈಗಾಗಲೇ ಗೇಣು, ಪಾದ, ಮೊಳಗಳಿಂದ ಉದ್ದವನ್ನು ಅಳೆಯುವುದನ್ನು ಕಲಿತಿರುವೆ. ಉದ್ದವನ್ನು ಅಳೆಯುವ ಇನ್ನು ಕೆಲವು ಅನೌಪಚಾರಿಕ ಮಾನಗಳನ್ನು ತಿಳಿ.

ಅಳೆಯುವ ಆಟ....

ಅನಘ ಮತ್ತು ಅವಳ ಸ್ನೇಹಿತರು ತಮ್ಮ ತರಗತಿಯಲ್ಲಿರುವ ವಿವಿಧ ಸಾಮಗ್ರಿಗಳ ಉದ್ದವನ್ನು ಅಳೆಯಲು ಪ್ರಯತ್ನಿಸುತ್ತಿದ್ದಾರೆ.



@KTBS NOT TO BE REPUBLISHED

ಮೇಜಿನ ಉದ್ದವನ್ನು ಅಳೆದ ಬಳಿಕ, ಒಬ್ಬ ಹೇಳುತ್ತಾನೆ–**"ಇದು ಹತ್ತು ಗೇಣು ಉದ್ದವಿದೆ".**

ಇನ್ನೊಬ್ಬ ಹೇಳುತ್ತಾನೆ–"ಇದು ಒಂಬತ್ತು ಗೇಣು ಉದ್ದವಿದೆ."

ಕೆಲವು ವಸ್ತುಗಳ ಉದ್ದವನ್ನು ಅಳೆದು ನಿನ್ನ ನೋಟ್ ಪುಸ್ತಕದಲ್ಲಿ ದಾಖಲಿಸು. ನಂತರ ನಿನ್ನ ಗೆಳೆಯರ ಅಳತೆಗಳೊಂದಿಗೆ ಹೋಲಿಸಿ ನೋಡು.

ಇದೇ ರೀತಿ ಅವರು ಬೇರೆ ಬೇರೆ ಸಾಮಗ್ರಿಗಳ ಉದ್ದವನ್ನು ಅಳೆದು ಹೋಲಿಸಿದಾಗ, ಪ್ರತಿಯೊಂದು ವಸ್ತುವು ಅಳತೆಯಲ್ಲಿ ಒಂದಕ್ಕಿಂತ ಒಂದು ಭಿನ್ನವಾಗಿರುವುದು ಕಂಡು ಬಂದಿತು.

1. ನಿನ್ನ ಪುಸ್ತಕ ಮತ್ತು ಪೆನ್ಸಿಲ್ ಬಾಕ್ಸ್‌ನ ಉದ್ದವನ್ನು ಬೆರಳುಗಳು ಹಾಗೂ ಗೇಣಿನ ಸಹಾಯದಿಂದ ಅಳೆದು ಈ ಕೆಳಗಿನ ಕೋಷ್ಟಕದಲ್ಲಿ ದಾಖಲಿಸು.

ಪುಸ್ತಕ		ಪೆನ್ಸಿಲ್ ಬಾಕ್ಸ್	
ಬೆರಳುಗಳು	ಗೇಣು	ಬೆರಳುಗಳು	ಗೇಣು

@KTBS NOT TO BE REPUBLISHED

ಬೆರಳಿನ ಅಳತೆ ಮತ್ತು ಗೇಣಿನ ಅಳತೆಯನ್ನು ಒಂದಕ್ಕೊಂದು ಹೋಲಿಸು.

ನಂತರ ಈ ಅಳತೆಗಳನ್ನು ನಿನ್ನ ಗೆಳೆಯ/ಗೆಳತಿಯ ಪುಸ್ತಕದಲ್ಲಿ ದಾಖಲಾಗಿರುವ ಅಳತೆಯೊಂದಿಗೆ ಹೋಲಿಸಿ ನೋಡು.

2. ಮೇಜು, ಡೆಸ್ಕ್ ಹಾಗೂ ಕರಿಹಲಗೆಯ ಉದ್ದವನ್ನೂ ನಿನ್ನ ಬೆರಳು ಹಾಗೂ ಗೇಣಿನ ಸಹಾಯದಿಂದ ಅಳೆದು, ಅವುಗಳನ್ನು ಹೋಲಿಸು.

ವಸ್ತುಗಳು	ಬೆರಳುಗಳು	ಗೇಣು	ನೀನು ಯಾವ ಅಳತೆಯ ಮಾನವನ್ನು ಬಯಸುವೆ? ಬೆರಳು/ಗೇಣು
ಮೇಜು			
ಡೆಸ್ಕ್			
ಕರಿಹಲಗೆ			

ಪಾದ ಮತ್ತು ಹೆಜ್ಜೆಗಳಿಂದ ಉದ್ದವನ್ನು ಅಳೆ. ನೀನು ಮತ್ತು ನಿನ್ನ ಇಬ್ಬರು ಸ್ನೇಹಿತರು ಅಳೆದು, ಅಳತೆಗಳನ್ನು ದಾಖಲಿಸಿ.

	ನೀನು		ಸಹಪಾಠಿ–1		ಸಹಪಾಠಿ–2	
	ಪಾದ	ಹೆಜ್ಜೆ	ಪಾದ	ಹೆಜ್ಜೆ	ಪಾದ	ಹೆಜ್ಜೆ
ತರಗತಿ ಕೊಠಡಿಯ ಉದ್ದ.						
ತರಗತಿ ಕೊಠಡಿಯಲ್ಲಿರುವ ಬಾಗಿಲು ಮತ್ತು ಕಿಟಕಿಯ ನಡುವಿನ ಉದ್ದ.						
ಕುಳಿತಿರುವ ಸ್ಥಳ ಮತ್ತು ಕಪ್ಪು ಹಲಗೆಗೂ ನಡುವೆ ಇರುವ ಉದ್ದ.						

@KTBS NOT TO BE REPUBLISHED

ನಿನ್ನ ಸುತ್ತಲೂ ಕಾಣುವ ವಿವಿಧ ವಸ್ತುಗಳಲ್ಲಿ ನಿನ್ನ ಗೇಣಿನ ಅಳತೆಗಿಂತಲೂ ಚಿಕ್ಕದಿರುವ ವಸ್ತುಗಳನ್ನು ಹೆಸರಿಸು.

1) _____


2) _____

3) _____

ಚಟುವಟಿಕೆ:

ದೂರವನ್ನು ಅಳೆಯಲು ಪಾದ ಮತ್ತು ಹೆಜ್ಜೆ-ಗಳನ್ನು ಬಳಸಲಾಗುವ ನಿತ್ಯ ಆಡುವ ವಿವಿಧ ಆಟಗಳನ್ನು ಪಟ್ಟಿಮಾಡು.

ಮೊಳ ಮತ್ತು ಮಾರು.



– ಮಾರು




– ಮೊಳ

1) ನಿನ್ನ ತರಗತಿಯ ಉದ್ದ_____ ಮಾರು ಮತ್ತು_____ ಮೊಳ.

2) ನಿನ್ನ ತರಗತಿಯಲ್ಲಿರುವ ಬೆಂಚಿನ ಉದ್ದ_____ ಮಾರು ಮತ್ತು_____ ಮೊಳ.

©KTBS NOT TO BE REPUBLISHED

ಗೋಲಿಯಾಟ




ಆಟದ ಮೈದಾನದಲ್ಲಿ ಕೆಲವು ಮಕ್ಕಳು ಗೋಲಿಯಾಟವನ್ನು ಆಡುತ್ತಿದ್ದಾರೆ. ಒಂದು ಮಗು ಒಂದು ಗೋಲಿಯಿಂದ ಇನ್ನೊಂದು ಗೋಲಿಗೆ ಇರುವ ಅಂತರವನ್ನು ಅಳೆಯುತ್ತಿದೆ.

ಚಿತ್ರದಲ್ಲಿ ಹುಡುಗನು ಉದ್ದವನ್ನು ಹೇಗೆ ಅಳೆಯುತ್ತಿದ್ದಾನೆ ?

ಹುಡುಗನು ಉದ್ದವನ್ನು ಗೇಣಿನ ಸಹಾಯದಿಂದ ಅಳೆಯುತ್ತಿದ್ದಾನೆ.

ಗಿಲ್ಲಿ–ದಾಂಡು (ಚಿಣ್ಣಿಕೋಲು)



© KTBS NOT TO BE REPUBLISHED

ಚಿತ್ರವನ್ನು ನೋಡು, ಕೆಲವು ಮಕ್ಕಳು 'ಗಿಲ್ಲಿ ದಾಂಡು' ಆಟ ಆಡುತ್ತಿದ್ದಾರೆ.

ಮೊದಲು ದಾಂಡನ್ನು ಗಿಲ್ಲಿಯಿಂದ ಅಳೆ.

ಒಂದು ದಾಂಡುವು 3 ಗಿಲ್ಲಿಗಳಿಗೆ ಸಮ.

ಚಿತ್ರದಲ್ಲಿ ಮಕ್ಕಳು ಉದ್ದವನ್ನು ಹೇಗೆ ಅಳೆಯುತ್ತಿದ್ದಾರೆ. ?

ಮಕ್ಕಳು ಉದ್ದವನ್ನು ಗಿಲ್ಲಿ ಮತ್ತು ದಾಂಡುವನ್ನು ಉಪಯೋಗಿಸಿ ಅಳೆಯುತ್ತಿದ್ದಾರೆ.

ಅವರು ಹೆಚ್ಚು ಉದ್ದವನ್ನು ಅಳೆಯಲು ದಾಂಡುವನ್ನು ಚಿಕ್ಕ ಉದ್ದವನ್ನು ಅಳೆಯಲು 'ಗಿಲ್ಲಿ' ಯನ್ನೂ ಬಳಸಿದ್ದಾರೆ.

ಚಟುವಟಿಕೆ:

ನಿನ್ನ ಮನೆಯಲ್ಲಿರುವ ಈ ಕೆಳಗಿನ ವಸ್ತುಗಳ ಉದ್ದವನ್ನು ಯಾವುದಾದರೂ ಎರಡು ಅನೌಪಚಾರಿಕ ಮಾನಗಳನ್ನು ಬಳಸಿ ಅಳತೆಮಾಡಿ, ಈ ಕೆಳಗಿನ ಕೋಷ್ಟಕದಲ್ಲಿ ದಾಖಲಿಸು, ನಂತರ ಅವುಗಳನ್ನು ನೀನೇ ಹೋಲಿಸಿನೋಡು.

ವಸ್ತುಗಳು	ಅಳತೆ ಅನೌಪಚಾರಿಕ ಅಳತೆ ಮಾನ–1	ಅಳತೆ ಅನೌಪಚಾರಿಕ ಅಳತೆ ಮಾನ–2
ಚಾಪೆಯ ಉದ್ದ		
ನಿನ್ನ ಮನೆಯ ಟಿ. ವಿ.ಯ ಉದ್ದ		
ಕಪಾಟಿನ ಉದ್ದ		
ಬಾಗಿಲಿನ ಉದ್ದ		


©KTBS NOT TO BE REPUBLISHED

ಊಹಿಸು ....

ನಮ್ಮ ನಿತ್ಯ ಜೀವನದಲ್ಲಿ ಅಂದಾಜಿಸುವ ಕೌಶಲ್ಯಕ್ಕೆ ಬಹಳ ಮಹತ್ವವಿದೆ.

ಚಿತ್ರವನ್ನು ನೋಡು. ಇಲ್ಲಿ ಎರಡು ಚಿತ್ರಗಳಿವೆ ಒಂದು ಪೆಟ್ಟಿಗೆ ಇನ್ನೊಂದು ಕಪಾಟು (ಬೀರು).

ಪೆಟ್ಟಿಗೆ ಉದ್ದವನ್ನು ಗೇಣುಗಳಲ್ಲಿ ಊಹಿಸು.



- ಪೆಟ್ಟಿಗೆಯ ಉದ್ದ ------- ಗೇಣುಗಳು
- ಕಪಾಟಿನ ಅಗಲವನ್ನು ಗೇಣುಗಳಲ್ಲಿ ಊಹಿಸು.
- ಕಪಾಟಿನ ಅಗಲ ------- ಗೇಣುಗಳು

ಈಗ ನಿನ್ನ ಗೇಣಿನಲ್ಲಿ ಅಳೆ.

ಪೆಟ್ಟಿಗೆಯ ಉದ್ದ ------- ಗೇಣುಗಳು. ಕಪಾಟಿನ ಅಗಲ ------- ಗೇಣುಗಳು.

ಯೋಚಿಸು ! ನೀನು ಊಹಿಸಿರುವ ಅಳತೆಗೂ, ಸರಿಯಾದ ಅಳತೆಗಳಿಗೂ ಏನಾದರೂ ವ್ಯತ್ಯಾಸ ಕಂಡಿತೇ ?

@KTBS NOT TO BE REPUBLISHED

ಪಾಠ - 10

S2S6W3

ತೂಕ

ಈ ಪಾಠವನ್ನು ಕಲಿತ ನಂತರ ನೀನು,

* ಭಾರ ಮತ್ತು ಹಗುರ ವಸ್ತುಗಳನ್ನು ಹೋಲಿಕೆ ಮಾಡುವುದನ್ನು ತಿಳಿಯುವೆ.


ಭಾರ ಮತ್ತು ಹಗುರ ವಸ್ತುಗಳ ಹೋಲಿಕೆ

ಊದಿ ನೋಡು !

ಒಂದು ಕಾಗದದ ಚೂರು ಮತ್ತು ಒಂದು ರಬ್ಬರ್ ತೆಗೆದುಕೊಂಡು ಮೇಜಿನ ಮೇಲಿಡು. ಆ ವಸ್ತುಗಳಿಗೆ ಅಡ್ಡಲಾಗಿ ಗಾಳಿ ಊದು.


ನೀನು ಏನನ್ನು ಗಮನಿಸಿದೆ ?

ಕಾಗದದ ಚೂರು ಹಾರಿಹೋಯಿತು.




ರಬ್ಬರ್‌ಗಿಂತ ಕಾಗದದ ಚೂರು ಹಗುರವಾಗಿದೆ. ಆದ್ದರಿಂದ ಅದು ಗಾಳಿಗೆ ಹಾರಿ ಕೆಳಗೆ ಬಿದ್ದಿದೆ.

ಕೆಳಗೆ ನೀಡಿರುವ ವಸ್ತುಗಳನ್ನು ಬಳಸಿ ಮೇಲಿನ ಚಟುವಟಿಕೆ ಮಾಡು. ಯಾವುದು ಭಾರವಾಗಿದೆ ಎಂದು ಚೌಕದಲ್ಲಿ ಬರೆ.





@KTBS NOT TO BE REPUBLISHED



@KTBS NOT TO BE REPUBLISHED


ಕೆಳಗಿನ ಚಿತ್ರಗಳನ್ನು ಗಮನಿಸು.






ಯಾವ ಪ್ರಾಣಿ ಹೆಚ್ಚು ಭಾರವಾಗಿದೆ ?
ಆನೆ ಭಾರವಾಗಿದೆ.

ಕೆಳಗಿನ ಚಿತ್ರಗಳನ್ನು ಗಮನಿಸಿ, ಯಾವುದು ಭಾರವಾಗಿದೆ ಎಂದು ಕೊಟ್ಟಿರುವ ಚೌಕದಲ್ಲಿ ✓ ಗುರುತು ಹಾಕು.











@KTBS NOT TO BE REPUBLISHED


ಮೇಲಿನ ಚಟುವಟಿಕೆ ಮಾಡುವ ಮುನ್ನ ಮಕ್ಕಳು ಬೇರೆ ಬೇರೆ ವಸ್ತುಗಳನ್ನು ಕೈಯಲ್ಲಿ ಹಿಡಿದು ಅವುಗಳ ತೂಕವನ್ನು ಹೋಲಿಕೆ ಮಾಡಿ ನೋಡಲಿ.

ಕೊಟ್ಟಿರುವ ಚಿತ್ರಗಳಲ್ಲಿ ಭಾರ ಮತ್ತು ಹಗುರ ವಸ್ತುಗಳನ್ನು ಗುರುತಿಸು. ಭಾರವಾದುದಕ್ಕೆ ಭಾ ಎಂದು, ಹಗುರವಾದುದಕ್ಕೆ ಹ ಎಂದು ಚೌಕದಲ್ಲಿ ಬರೆ.

ಉದಾ :

<table>
<tr>
<td>ಉದಾ :
 
ಹ</td>
<td> 
ಭಾ</td>
</tr>
<tr>
<td>  </td>
<td>  </td>
</tr>
<tr>
<td>  </td>
<td>  </td>
</tr>
<tr>
<td>  </td>
<td>  </td>
</tr>
<tr>
<td>  </td>
<td>  </td>
</tr>
</table>

@KTBS NOT TO BE REPUBLISHED



ಚಟುವಟಿಕೆ :

ಒಂದು ಪಾತ್ರೆಯಲ್ಲಿ ನೀರು ತೆಗೆದುಕೊಂಡು ಅದರಲ್ಲಿ ಒಂದು ಮರದ ತುಂಡು ಮತ್ತು ಒಂದು ಬೆಂಡಿನ ತುಂಡು ಹಾಕು. ಯಾವುದು ತೇಲುತ್ತದೆ.? ಏಕೆ?

@KTBS NOT TO BE REPUBLISHED

ಸೂಚನೆ :

ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಸ್ಥಳೀಯವಾಗಿ ಸಿಗುವ ಬೇರೆ ಬೇರೆ ವಸ್ತುಗಳನ್ನು ಬಳಸಿ ಮಾಡಿಸಬಹುದು.



ಪಾಠ - 11

S4V9A9

ಕಾಲ


ಈ ಪಾಠವನ್ನು ಕಲಿತ ನಂತರ ನೀನು,


- ವಾರದ ಏಳು ದಿನಗಳನ್ನು ತಿಳಿಯುವೆ
- ನಿನ್ನೆ, ಇಂದು, ನಾಳೆಗಳನ್ನು ಪರಿಚಯಿಸಿಕೊಳ್ಳುವೆ.
- ವರ್ಷದ ತಿಂಗಳುಗಳನ್ನು ಪರಿಚಯಿಸಿಕೊಳ್ಳುವೆ.
- ಋತುಗಳನ್ನೊಳಗೊಂಡಿರುವ ನೈಸರ್ಗಿಕ ಚಕ್ರೀಯ ಘಟನೆಗಳನ್ನು ಗುರುತಿಸುವೆ.
- ಹಿಂದಿನ ಮಹತ್ವದ ಘಟನೆಗಳು ಸಂಭವಿಸಿದ ದಿನ/ದಿನಾಂಕಗಳನ್ನು ಕ್ರಮವಾಗಿ ತಿಳಿಯುವೆ.
- ಹನ್ನೆರಡು ತಿಂಗಳುಗಳ ದಿನದರ್ಶಿಕೆಯನ್ನು ಪರಿಚಯಿಸಿಕೊಳ್ಳುವೆ ಮತ್ತು ವಾರ, ದಿನಗಳು ಮತ್ತು ತಿಂಗಳುಗಳ ಹೆಸರುಗಳನ್ನು ಬರೆಯುವೆ.

@KTBS NOT TO BE REPUBLISHED

ವಾರದ ಏಳು ದಿನಗಳು

ಭಾನುವಾರ
ಸೋಮವಾರ
ಮಂಗಳವಾರ
ಬುಧವಾರ
ಗುರುವಾರ
ಶುಕ್ರವಾರ
ಶನಿವಾರ





@KTBS NOT TO BE REPUBLISHED

ಬಿಟ್ಟ ಜಾಗಗಳನ್ನು ತುಂಬು.

1) ವಾರದ ಐದನೇ ದಿನ _____

2) ಸೋಮವಾರವು ವಾರದ _____ ನೇ ದಿನ.

3) ವಾರದ ಕೊನೆಯ ದಿನ _____

4) ಭಾನುವಾರವು ವಾರದ _____ ನೇ ದಿನ.

5) ವಾರದ ನಾಲ್ಕನೇ ದಿನ _____

6) ಮಂಗಳವಾರವು ವಾರದ _____ ನೇ ದಿನ.

7) ಒಂದು ವಾರದಲ್ಲಿ _____ ದಿನಗಳಿವೆ.

8) ವಾರದ ಆರನೇ ದಿನ _____

ಮುಂಚಿನ ದಿನ ಮತ್ತು ನಂತರದ ದಿನ : ಉದಾಹರಣೆಯಲ್ಲಿ ತೋರಿಸಿರುವಂತೆ ಬಿಟ್ಟ ಸ್ಥಳ ತುಂಬು.

ಉದಾ : ಭಾನುವಾರ	ಸೋಮವಾರ	ಮಂಗಳವಾರ
	ಬುಧವಾರ	
	ಗುರುವಾರ	
	ಶುಕ್ರವಾರ	
	ಶನಿವಾರ	
	ಭಾನುವಾರ	
	ಮಂಗಳವಾರ	

@KTBS NOT TO BE REPUBLISHED

1) 'ಬುಧವಾರ' ದ ನಂತರ ಬರುವ ಎರಡು ಅನುಕ್ರಮ ದಿನಗಳನ್ನು ಬರೆ.

_____ , _____


2) 'ಶನಿವಾರ' ದ ಮುಂಚೆ ಬರುವ ಎರಡು ಅನುಕ್ರಮ ದಿನಗಳನ್ನು ಬರೆ.

_____ , _____

3) 'ಸೋಮವಾರ' ದ ನಂತರ ಬರುವ ಎರಡು ಅನುಕ್ರಮ ದಿನಗಳನ್ನು ಬರೆ.

_____ , _____

ನಿನ್ನೆ, ಇಂದು ಮತ್ತು ನಾಳೆ



ಈ ದಿನ ಸೋಮವಾರವಾದರೆ,

ನಿನ್ನೆಯ ದಿನ ಭಾನುವಾರ,

ಮತ್ತು ನಾಳೆಯ ದಿನ ಮಂಗಳವಾರ.

©KTBS NOT TO BE REPUBLISHED

ಯೋಚಿಸು :

ಇಂದು ಶುಕ್ರವಾರ. ರಾಮನ ಹುಟ್ಟು ಹಬ್ಬ. ನಿನ್ನೆ ಅವನು ತನ್ನ ಗೆಳೆಯನಾದ ರಾಜುವಿನ ಹುಟ್ಟು ಹಬ್ಬಕ್ಕೆ ಹೋಗಿದ್ದ.

ನಾಳೆ ರಾಜು ಮತ್ತು ರಾಮ ಇಬ್ಬರೂ ಡೇವಿಡ್ ನ ಹುಟ್ಟುಹಬ್ಬಕ್ಕೆ ಹೋಗುವರು.

- ರಾಜು ಹುಟ್ಟಿದ ಹಬ್ಬ ಆಚರಿಸಿಕೊಂಡ ದಿನವನ್ನು ಹೆಸರಿಸು.

  _____

- ಡೇವಿಡ್ ಹುಟ್ಟಿದ ಹಬ್ಬ ಆಚರಿಸಿಕೊಳ್ಳುವ ದಿನವನ್ನು ಹೆಸರಿಸು.

  _____

ಪಟ್ಟಿಯನ್ನು ಪೂರ್ಣಗೊಳಿಸು.

ನಿನ್ನೆ	ಇಂದು	ನಾಳೆ
ಭಾನುವಾರ	ಸೋಮವಾರ	
		ಗುರುವಾರ
ಮಂಗಳವಾರ		
	ಶನಿವಾರ	
ಗುರುವಾರ		
	ಭಾನುವಾರ	

ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರಗಳಿಂದ ತುಂಬಿಸು.

1) ನಿನ್ನೆ ಭಾನುವಾರವಾದರೆ ಇಂದು _____

2) ಇಂದು ಶುಕ್ರವಾರವಾದರೆ ನಾಳೆ _____

3) ನಿನ್ನೆ ಬುಧವಾರ ಇಂದು _____ ಮತ್ತು ನಾಳೆ _____

4) ಸೋಮವಾರದ ನಂತರದ ದಿನ _____

5) ಮಂಗಳವಾರವು _____ ವಾರದ ನಂತರ ಬರುತ್ತದೆ.


6) ಗುರುವಾರದ ಹಿಂದಿನ ದಿನ _____

7) ಇಂದು ಶನಿವಾರವಾದರೆ, ನಿನ್ನೆ _____ ಮತ್ತು ನಾಳೆ _____

8) ಸೋಮವಾರ ಅನಘಳ ಹುಟ್ಟು ಹಬ್ಬವಾದರೆ, ಅದರ ಮುಂದಿನ ದಿನ _____

@KTBS NOT TO BE REPUBLISHED


ವರ್ಷದ ತಿಂಗಳುಗಳು




NOT TO BE REPUBLISHED @KTBS

ಚಿತ್ರವನ್ನು ಗಮನಿಸು. ಕೊಟ್ಟಿರುವ ಕೋಷ್ಟಕದಲ್ಲಿರುವ ಸೂಚನೆಗಳಂತೆ ವರ್ಷದ ತಿಂಗಳುಗಳನ್ನು ಪಟ್ಟಿ ಮಾಡು.

31 ದಿನಗಳನ್ನು ಹೊಂದಿರುವ ತಿಂಗಳುಗಳು	**30** ದಿನಗಳನ್ನು ಹೊಂದಿರುವ ತಿಂಗಳುಗಳು	ಅತೀ ಕಡಿಮೆ ದಿನಗಳನ್ನು ಹೊಂದಿರುವ ತಿಂಗಳು



ವರ್ಷದ ಎಲ್ಲಾ ತಿಂಗಳು ನಿನ್ನ ಕೈಯಲ್ಲಿ





ಕೆಲವು ವರ್ಷಗಳಲ್ಲಿ ನಾವು 366 ದಿನಗಳನ್ನು ಕಾಣಬಹುದು. ಅದುವೇ **"ಅಧಿಕ ವರ್ಷ"**

ಪ್ರತೀ ನಾಲ್ಕು ವರ್ಷಗಳಿಗೊಮ್ಮೆ ಅಧಿಕ ವರ್ಷವು ಬರುತ್ತದೆ. ಅಧಿಕ ವರ್ಷದ ಫೆಬ್ರವರಿ ತಿಂಗಳಿನಲ್ಲಿ 29 ದಿನಗಳಿರುತ್ತವೆ.

@KTBS NOT TO BE REPUBLISHED

ತಿಂಗಳುಗಳು	ದಿನಗಳು
ಜನವರಿ	31
ಫೆಬ್ರವರಿ	28 ಅಥವಾ 29
ಮಾರ್ಚ್	31
ಏಪ್ರಿಲ್	30
ಮೇ	31
ಜೂನ್	30
ಜುಲೈ	31
ಆಗಸ್ಟ್	31
ಸೆಪ್ಟೆಂಬರ್	30
ಅಕ್ಟೋಬರ್	31
ನವೆಂಬರ್	30
ಡಿಸೆಂಬರ್	31
12 ತಿಂಗಳುಗಳು	**365** ದಿನಗಳು (ಅಥವಾ 366 ದಿನಗಳು)

@KTBS NOT TO BE REPUBLISHED

1) ವರ್ಷದ 10 ನೇ ತಿಂಗಳು _____

2) ವರ್ಷದ 12 ನೇ ತಿಂಗಳು _____

3) ಜನವರಿ ತಿಂಗಳಿನಲ್ಲಿ _____ ದಿನಗಳಿವೆ.

4) ನವೆಂಬರ್ ತಿಂಗಳಿನಲ್ಲಿ _____ ದಿನಗಳಿವೆ.

5) 30 ದಿನಗಳನ್ನು ಹೊಂದಿರುವ ತಿಂಗಳುಗಳ ಸಂಖ್ಯೆ _____

6) 31 ದಿನಗಳನ್ನು ಹೊಂದಿರುವ ತಿಂಗಳುಗಳ ಸಂಖ್ಯೆ _____

7) 28 ಅಥವಾ 29 ದಿನಗಳಿರುವ ತಿಂಗಳು _____

8) ಒಂದು ವರ್ಷ ಎಷ್ಟು ತಿಂಗಳುಗಳಿಗೆ ಸಮ _____

ವರ್ಷದ ಕಾಲಗಳು


ಬೇಸಿಗೆ ಕಾಲ	ಮಳೆಗಾಲ	ಚಳಿಗಾಲ
▶ ಫೆಬ್ರವರಿ	▶ ಜೂನ್	▶ ಅಕ್ಟೋಬರ್
▶ ಮಾರ್ಚ್	▶ ಜುಲೈ	▶ ನವಂಬರ್
▶ ಏಪ್ರಿಲ್	▶ ಆಗಸ್ಟ್	▶ ಡಿಸೆಂಬರ್
▶ ಮೇ	▶ ಸೆಪ್ಟೆಂಬರ್	▶ ಜನವರಿ

ಬೇಸಿಗೆಕಾಲ, ಮಳೆಗಾಲ, ಚಳಿಗಾಲ ಹೀಗೆ ಒಂದು ವರ್ಷಕ್ಕೆ 3 ಕಾಲಗಳು. ಸಾಮಾನ್ಯವಾಗಿ ವರ್ಷದ ಹನ್ನೆರಡು ತಿಂಗಳುಗಳಲ್ಲಿ ಬರುವ ಕಾಲಗಳ ಪಟ್ಟಿ ಮೇಲಿನಂತಿದೆ.

ಕೆಳಗಿನ ಚಿತ್ರಗಳನ್ನು ಗಮನಿಸು.

ಪ್ರತಿ ವರ್ಷವು


- ಸಾಮಾನ್ಯವಾಗಿ ಫೆಬ್ರವರಿ ತಿಂಗಳ ಕೊನೆಯಿಂದ ಮಾರ್ಚ್, ಏಪ್ರಿಲ್, ಮೇ ತಿಂಗಳವರೆಗೆ ನಮಗೆ ಸೆಕೆಯ ಅನುಭವವಾಗುತ್ತದೆ.
- ಇದು ಬೇಸಿಗೆ ಕಾಲ.



- ಬೇಸಿಗೆ ಕಾಲದಲ್ಲಿ ತುಂಬಾ ಸೆಕೆ ಇರುತ್ತದೆ.
- ಸಾಮಾನ್ಯವಾಗಿ ನಾವು ಈ ಕಾಲದಲ್ಲಿ ತೆಳುವಾದ ಹತ್ತಿ ಬಟ್ಟೆಯನ್ನು ಧರಿಸುತ್ತೇವೆ.
- ಮರಗಳು ಚಿಗುರೊಡೆಯಲು ಪ್ರಾರಂಭಿಸಿ, ಎಲೆ ಮತ್ತು ಹೂಗಳು ಅರಳುವ ಕಾಲವಿದು.
- ಪ್ರಕೃತಿಯು ನಮಗೆ ಸಿಹಿಯಾದ ಮಾವಿನ ಹಣ್ಣುಗಳನ್ನು ಈ ಕಾಲದಲ್ಲಿ ನೀಡುತ್ತವೆ.

@KTBS NOT TO BE REPUBLISHED

- ಸಾಮಾನ್ಯವಾಗಿ ಜೂನ್, ಜುಲೈ, ಆಗಸ್ಟ್ ಮತ್ತು ಸಪ್ಟೆಂಬರ್ ತಿಂಗಳು ಎಂದೊಡನೆ, ಇಡೀ ದೇಶ ಮಳೆಯಿಂದ ಸಮೃದ್ಧವಾಗುತ್ತದೆ. ಮಕ್ಕಳು ಮಳೆಯೊಂದಿಗೆ ಸಂತಸಗೊಳ್ಳುತ್ತಾರೆ.
- **ಇದು ಮಳೆಗಾಲ.**



- ಮಕ್ಕಳಿಗೆ ಮಳೆಯಲ್ಲಿ ಆಡುವುದೇ ಪ್ರೀತಿ.
- ಮಳೆ ಬಂದೊಡನೆ ಮರ ಗಿಡಗಳು ಹಚ್ಚ ಹಸುರಿನಿಂದ ಕಂಗೊಳಿಸುತ್ತವೆ.
- ಮಳೆಗಾಲದಲ್ಲಿ ನಾವು ಕೊಡೆ ಹಿಡಿದು ಕೊಳ್ಳುತ್ತೇವೆ.
- ಸಾಮಾನ್ಯವಾಗಿ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ತಿಂಗಳುಗಳು ಚಳಿಯಿಂದ ಕೂಡಿರುತ್ತವೆ.
- **ಇದು ಚಳಿಗಾಲ.**




- ಚಳಿಗಾಲದಲ್ಲಿ ಸ್ವೆಟರ್ ಮತ್ತು ಶಾಲುಗಳನ್ನು ಕಪಾಟಿನಿಂದ ಹೊರಗೆ ತೆಗೆಯುತ್ತೇವೆ.
- ಎಲೆ ಉದುರಿದ ಮರಗಳು, ಜೀವವಿಲ್ಲದಂತೆ ಕಾಣುತ್ತವೆ.
- ದೇಶದ ಕೆಲವು ಭಾಗಗಳಲ್ಲಿ ತುಂಬಾ ಮಂಜು ಬೀಳುತ್ತದೆ ಮತ್ತು ಮಕ್ಕಳ ಜೊತೆಗೆ ದೊಡ್ಡವರೂ ಮಂಜಿನಲ್ಲಿ ಸಂತೋಷದಿಂದ ಆಡುವರು.

© KTBS NOT TO BE REPUBLISHED

ಚಟುವಟಿಕೆ :

ಚಳಿಗಾಲದ ತಿಂಗಳುಗಳಿಗೆ ನೀಲಿ, ಬೇಸಿಗೆ ಕಾಲದ ತಿಂಗಳುಗಳಿಗೆ ಹಳದಿ ಮತ್ತು ಮಳೆಗಾಲದ ತಿಂಗಳುಗಳಿಗೆ ಹಸಿರು ಬಣ್ಣ ಹಚ್ಚಿ.



@KTBS NOT TO BE REPUBLISHED

ಚಾಂದ್ರಮಾನ ಕ್ಯಾಲೆಂಡರ್‌ನಲ್ಲಿ ತಿಂಗಳುಗಳ ಹೆಸರುಗಳು

1) ಚೈತ್ರ	2) ವೈಶಾಖ	3) ಜೇಷ್ಠ
4) ಆಷಾಢ	5) ಶ್ರಾವಣ	6) ಭಾದ್ರಪದ
7) ಆಶ್ವೀಜ	8) ಕಾರ್ತಿಕ	9) ಮಾರ್ಗಶಿರ
10) ಪುಷ್ಯ	11) ಮಾಘ	12) ಫಾಲ್ಗುಣ


ಬಿಟ್ಟ ಸ್ಥಳಗಳನ್ನು ತುಂಬು.


ಬೇಸಿಗೆ ಕಾಲ _____ , _____ , _____ , _____ ತಿಂಗಳುಗಳು.

ಚಳಿಗಾಲ _____ , _____ , _____ , _____ ತಿಂಗಳುಗಳು.

ಮಳೆಗಾಲ _____ , _____ , _____ , _____ ತಿಂಗಳುಗಳು.

ಹಗಲು ಮತ್ತು ರಾತ್ರಿ






ಮೇಲಿನ ಚಿತ್ರಗಳಲ್ಲಿ ನೀನು ಕಂಡುಕೊಂಡಿರುವ ವ್ಯತ್ಯಾಸಗಳೇನು ?

* ನಾವು ಹಗಲು ಹೊತ್ತಿನಲ್ಲಿ ಕೆಲಸ ಮಾಡುತ್ತೇವೆ.
* ರಾತ್ರಿ ಹೊತ್ತಿನಲ್ಲಿ ನಿದ್ರಿಸುತ್ತೇವೆ.
* ಪಕ್ಷಿಗಳು ಹಗಲು ಹೊತ್ತಿನಲ್ಲಿ ಹಾರಾಡುತ್ತವೆ.
* ರಾತ್ರಿ ಹೊತ್ತಿನಲ್ಲಿ ಗೂಡಿನಲ್ಲಿ ವಿಶ್ರಾಂತಿ ಪಡೆಯುತ್ತವೆ.
* ನಾವು ಹಗಲು ಹೊತ್ತಿನಲ್ಲಿ ಸೂರ್ಯನ ಬೆಳಕು ಪಡೆಯುತ್ತೇವೆ.
* ರಾತ್ರಿ ಹೊತ್ತಿನಲ್ಲಿ ಬೇರೆ ಬೇರೆ ಕೃತಕ ಬೆಳಕಿನ ಮೂಲಗಳನ್ನು ನಾವು ಉಪಯೋಗಿಸುತ್ತೇವೆ.

©KTBS NOT TO BE REPUBLISHED



ಸರಿಯಾಗಿದ್ದಲ್ಲಿ '✓' ಎಂದೂ, ತಪ್ಪಾಗಿದ್ದಲ್ಲಿ 'x' ಎಂದೂ ಚೌಕದಲ್ಲಿ ಬರೆ.

1) ನಾವು ಹಗಲು ಹೊತ್ತಿನಲ್ಲಿ ನಿದ್ರಿಸುತ್ತೇವೆ. ☐

2) ನಾವು ರಾತ್ರಿ ಸೂರ್ಯನ ಬೆಳಕು ಪಡೆಯುತ್ತೇವೆ. ☐

3) ನಾವು ಹಗಲು ಹೊತ್ತಿನಲ್ಲಿ ಕೆಲಸ ಮಾಡುತ್ತೇವೆ. ☐

4) ಪಕ್ಷಿಗಳು ರಾತ್ರಿಯ ಹೊತ್ತು ಗೂಡಿನಲ್ಲಿ ವಿಶ್ರಾಂತಿ ಪಡೆಯುತ್ತವೆ. ☐

5) ನಾವು ಹಗಲು ಹೊತ್ತಿನಲ್ಲಿ ಸೂರ್ಯನ ಬೆಳಕು ಪಡೆಯುತ್ತೇವೆ. ☐

6) ಸೂರ್ಯಾಸ್ತದೊಂದಿಗೆ ಹಗಲು ಆರಂಭವಾಗುತ್ತದೆ. ☐

7) ಸೂರ್ಯಾಸ್ತದೊಂದಿಗೆ ರಾತ್ರಿ ಆರಂಭವಾಗುತ್ತದೆ. ☐

ಘಟನಾವಳಿಗಳ ಅನುಕ್ರಮಣಿಕೆ

ಚಟುವಟಿಕೆ :

12 ತಿಂಗಳುಗಳ ಹೆಸರು ಬರೆದಿರುವ ಕಾರ್ಡ್‌ಗಳ ಸೆಟ್ಟುಗಳನ್ನು ತೆಗೆದುಕೊ. ನಿನ್ನ ತರಗತಿಯನ್ನು ಗುಂಪುಗಳಾಗಿ ವಿಂಗಡಿಸಿಕೊ. ಪ್ರತೀ ಗುಂಪಿನಲ್ಲಿ 12 ಮಂದಿ ಇರಲಿ.

ಈಗ 12 ತಿಂಗಳುಗಳ ಹೆಸರುಗಳನ್ನು ಬರೆದಿರುವ ಕಾರ್ಡ್‌ಗಳ ಒಂದೊಂದು ಸೆಟ್ಟನ್ನು ಪ್ರತೀ ಗುಂಪಿಗೂ ನೀಡು.



@KTBS NOT TO BE REPUBLISHED

'ಜನವರಿ' ತಿಂಗಳಿಂದ ಆಟವನ್ನು ಪ್ರಾರಂಭಿಸು. 'ಜನವರಿ' ಕಾರ್ಡನ್ನು ಹೊಂದಿರುವ ಪ್ರತಿ ಗುಂಪಿನ ಒಬ್ಬೊಬ್ಬ ವಿದ್ಯಾರ್ಥಿ ಮುಂದೆ ಬಂದು, ಆ ತಿಂಗಳ ಹಬ್ಬಗಳು ಮತ್ತು ರಾಷ್ಟ್ರೀಯ ಹಬ್ಬಗಳನ್ನು ಹೇಳಲಿ.

ಉದಾಹರಣೆಗೆ,

ಒಂದನೇ ಗುಂಪಿನ ವಿದ್ಯಾರ್ಥಿ : ಈ ತಿಂಗಳಲ್ಲಿ ನಾವು ಸುಗ್ಗಿಯ ಹಬ್ಬವಾದ **"ಮಕರ ಸಂಕ್ರಾಂತಿ"** ಯನ್ನು ಆಚರಿಸುತ್ತೇವೆ.

ಎರಡನೇ ಗುಂಪಿನ ವಿದ್ಯಾರ್ಥಿ : ಈ ತಿಂಗಳ 26 ರಂದು ನಾವು ರಾಷ್ಟ್ರೀಯ ಹಬ್ಬವಾದ **"ಗಣರಾಜ್ಯದಿನ"** ವನ್ನು ಆಚರಿಸುತ್ತೇವೆ.

ಇದೇ ರೀತಿ ಎಲ್ಲಾ ತಿಂಗಳುಗಳನ್ನು ಸೇರಿಸಿಕೊಂಡು ಈ ಆಟವನ್ನು ಆಡು.

ಇದೇ ರೀತಿ ಪ್ರತೀ ವರ್ಷ ನಡೆಯುವ ಅನೇಕ ಘಟನೆಗಳು, ಹಬ್ಬಗಳು, ರಾಷ್ಟ್ರೀಯ ಹಬ್ಬಗಳು, ಹುಟ್ಟು ಹಬ್ಬಗಳು, ಶಾಲಾ ವಾರ್ಷಿಕ ದಿನ... ಇತ್ಯಾದಿಗಳನ್ನು ಕ್ರಮವಾಗಿ ತಿಳಿ.

ಯೋಚಿಸಿ ಉತ್ತರಿಸು.

1) ನಾವು ಗಣರಾಜ್ಯೋತ್ಸವವನ್ನು ಆಚರಿಸುವ ದಿನ _____

2) ನಾವು ಪರಿಸರ ದಿನವನ್ನು ಜೂನ್ _____ ರಂದು ಆಚರಿಸುತ್ತೇವೆ.

3) ನಾವು ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ದಿನ _____

4) ಶಿಕ್ಷಕರ ದಿನ _____ ತಿಂಗಳಲ್ಲಿ ಬರುತ್ತದೆ.

5) ನಾವು ಗಾಂಧೀಜಯಂತಿಯನ್ನು ಆಚರಿಸುವ ದಿನ _____

6) ನಾವು ಕನ್ನಡ ರಾಜ್ಯೋತ್ಸವವನ್ನು _____ ರಂದು ಆಚರಿಸುತ್ತೇವೆ.


7) ನಾವು ಮಕ್ಕಳ ದಿನವನ್ನು _____ ರಂದು ಆಚರಿಸುತ್ತೇವೆ.

8) ನಾವು 'ಕ್ರಿಸ್‌ಮಸ್' ಆಚರಿಸುವ ದಿನ _____

9) ನೀನು ಹುಟ್ಟಿದ ದಿನ _____

@KTBS NOT TO BE REPUBLISHED

ಕೆಳಗಿನ ಘಟನೆಗಳನ್ನು ಸೂಕ್ತ ತಿಂಗಳುಗಳೊಂದಿಗೆ ಹೊಂದಿಸು.



@KTBS NOT TO BE REPUBLISHED

2017ರ ದಿನದರ್ಶಿಕೆ (ಕ್ಯಾಲೆಂಡರ್)

ಜನವರಿ

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30	31				

ಫೆಬ್ರವರಿ

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28				

ಮಾರ್ಚ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

ಏಪ್ರಿಲ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
30						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

ಮೇ

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30	31			

ಜೂನ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	

ಜುಲೈ

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
30	31					1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

ಆಗಸ್ಟ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

ಸೆಪ್ಟೆಂಬರ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

ಅಕ್ಟೋಬರ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30	31				

ನವೆಂಬರ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30		

ಡಿಸೆಂಬರ್

ಭಾನು	ಸೋಮ	ಮಂಗಳ	ಬುಧ	ಗುರು	ಶುಕ್ರ	ಶನಿ
31					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

©KTBS NOT TO BE REPUBLISHED

ಒಂದು ತಿಂಗಳಲ್ಲಿ 4 ಪೂರ್ಣವಾರಗಳಿರುತ್ತವೆ.

ಒಂದು ವರ್ಷದಲ್ಲಿ 52 ಪೂರ್ಣವಾರಗಳಿರುತ್ತವೆ.

ಒಂದು ವರ್ಷದಲ್ಲಿ 12 ತಿಂಗಳುಗಳಿರುತ್ತವೆ.



ಕೊಟ್ಟಿರುವ ದಿನದರ್ಶಿಕೆ (ಕ್ಯಾಲೆಂಡರ್)ಯನ್ನು ಗಮನಿಸು. ನಂತರ ಈ ಕೆಳಗಿನವುಗಳಿಗೆ ಉತ್ತರಿಸು.

1) ವರ್ಷದ ಅತೀ ಚಿಕ್ಕ ತಿಂಗಳು _____ ಇದರಲ್ಲಿ _____ ದಿನಗಳಿವೆ.

2) ಹೆಚ್ಚು ಭಾನುವಾರಗಳಿರುವ ತಿಂಗಳುಗಳು ಎಷ್ಟಿವೆ ? _____

ಆ ತಿಂಗಳುಗಳ ಹೆಸರುಗಳು _____

3) ನಿನ್ನ ಹುಟ್ಟುಹಬ್ಬ ಬರುವ ತಿಂಗಳು _____

ನಿನ್ನ ಹುಟ್ಟು ಹಬ್ಬದ ದಿನಾಂಕ ಮತ್ತು ವಾರ _____

ಚಟುವಟಿಕೆ :–

ಕೊಟ್ಟಿರುವ ಕ್ಯಾಲೆಂಡರ್‌ನಲ್ಲಿ ನಿನ್ನ ಐದು ಜನ ಸ್ನೇಹಿತರ ಹುಟ್ಟುಹಬ್ಬದ ದಿನಾಂಕಗಳನ್ನು ವೃತ್ತಹಾಕಿ ಗುರುತಿಸು.

@KTBS NOT TO BE REPUBLISHED

ಚಟುವಟಿಕೆ :–

ಈ ಕೆಳಗೆ ಕೊಟ್ಟಿರುವ ಕೋಷ್ಟಕದಿಂದ **12** ತಿಂಗಳುಗಳ ಹೆಸರುಗಳಿಗೆ ಬೇರೆ ಬೇರೆ ಬಣ್ಣಗಳನ್ನು ಹಚ್ಚಿ.

ರಿ	ಮಾ	ಬ	ಸೆ	ಈ	ಜ	ಡ	ಡಿ	ಜೂ	ನ್
ಮ	ಲ	ಜ	ವ	ಅ	ಜು	ನ್	ಸೆಂ	ಚ	ಟ
ಜ	ನ	ವ	ರಿ	ದ	ಲೈ	ಕ	ಬ	ಜ	ನ
ನ	ಸೆ	ಗ	ಪ	ಅ	ಕ್ಟೋ	ಬ	ರ್	ಸ	ಪ
ಷ	ಪ್ಟೆಂ	ಬ	ನ	ರ	ಪ್ಟೈ	ಫೆ	ಬ್ರ	ವ	ರಿ
ಏ	ಬ	ಅ	ಆ	ಗ	ಸ್ಟ್	ಯ	ಡಿ	ಪ	ಗ
ಪ್ರಿ	ರ್	ಜ	ಜು	ಕ್ಟೋ	ಗ	ಅ	ಬ	ಟ	ನ
ಲ್	ನ	ವೆಂ	ಬ	ರ್	ಲೈ	ನ	ಬ	ಜ	ದ
ಚ	ಕ	ಬ	ರ್	ಜೂ	ಸ	ಮಾ	ಡ	ಮೇ	ರ
ಅ	ರ್	ನ	ಸೆ	ಗ	ನ್	ಚ್ರ್	ಊ	ಗ	ಉ

NOT TO BE REPUBLISHED @KTBS

ಪಾಠ - 12

ದತ್ತಾಂಶಗಳ ನಿರ್ವಹಣೆ.

C4X2M2


ಈ ಪಾಠವನ್ನು ಕಲಿತ ನಂತರ ನೀನು,

- ದತ್ತಾಂಶಗಳನ್ನು ಅಳತೆಯ ಮೂಲಕ ಸಂಗ್ರಹಿಸುವೆ.
- ದತ್ತಾಂಶಗಳ ಬಗ್ಗೆ ಚರ್ಚೆ ಹಾಗೂ ವಿಂಗಡಣೆಯಾದ ತರುವಾಯ ಬಣ್ಣ ಮತ್ತು ಗಾತ್ರಗಳಿಂದ ಪ್ರತಿನಿಧಿಸುವೆ.
- ದತ್ತಾಂಶಗಳಿಂದ ಸೂಕ್ತ ತೀರ್ಮಾನಕ್ಕೆ ಬರುವೆ.


© KTBS NOT TO BE REPUBLISHED


ಚಟುವಟಿಕೆ 1 :


ಅಪ್ಪುವಿನ ಬಳಿಯಿರುವ ಈ ಚಾರ್ಟ್‌ನಲ್ಲಿ ಬೇರೆ ಬೇರೆ ರೀತಿಯ ಮೀನುಗಳಿವೆ.




ಚಾರ್ಟಿನಲ್ಲಿ ಬೇರೆ ಬೇರೆ ರೀತಿಯ ಎಷ್ಟು ಮೀನುಗಳಿವೆ ಎಂದು ಎಣಿಸಿ, ಸೂಕ್ತ ಜಾಗದಲ್ಲಿ ಬರೆ.


1) 


2) 

3) 


4) 


ಚಾರ್ಟಿನಲ್ಲಿ ಯಾವ ಬಣ್ಣದ ಮೀನುಗಳು ಹೆಚ್ಚಿವೆ? ಬಣ್ಣಹಾಕು.





ಚಾರ್ಟಿನಲ್ಲಿ ಯಾವ ಬಣ್ಣದ ಮೀನುಗಳು ಕಡಿಮೆ ಇವೆ? ಬಣ್ಣಹಾಕು.





©KTBS NOT TO BE REPUBLISHED

ಚಟುವಟಿಕೆ 2 :

ಸುಮ : ಅನನ್ಯಳು ತನ್ನ ಹುಟ್ಟು ಹಬ್ಬಕ್ಕೆ ನಮ್ಮನ್ನೆಲ್ಲಾ ಆಹ್ವಾನಿಸಿದ್ದಾಳೆ. ಅನನ್ಯಳ ಹುಟ್ಟು ಹಬ್ಬವನ್ನು ಆಚರಿಸಲು ನಾವೆಲ್ಲ ಅವಳ ಮನೆಗೆ ಹೋಗೋಣವೆ?

[ಸುಮ, ರೇಷ್ಮ, ಪೀಟರ್, ಕೃಷ್ಣ, ಮತ್ತು ಅನು ಅನನ್ಯಳ ಮನೆಗೆ ಹೋದರು. ಅನನ್ಯಳಿಗೆ ಶುಭಾಶಯವನ್ನು ಕೋರಿ ಉಡುಗೊರೆಗಳನ್ನು ನೀಡಿದರು.]



ಅನನ್ಯ : ಓ! ಏನು ಆಶ್ಚರ್ಯ. ನನಗೆ ಎಷ್ಟೊಂದು ಉಡುಗೊರೆಗಳು ಬಂದಿವೆ.


ಸುಮ : ಅನನ್ಯ, ನಿನಗೆ ಗೊಂಬೆಗಳು, ಕ್ರಯಾನ್ಸ್, ಪೆನ್ಸಿಲ್ ಬಾಕ್ಸ್, ಚಾಕೊಲೇಟ್‌ಗಳು, ಪೆನ್ನುಗಳು, ನೀರಿನ ಬಾಟೆಲ್‌ಗಳು ಇನ್ನು ಎಷ್ಟೊಂದು ಉಡುಗೊರೆಗಳು ಬಂದಿವೆ.

ಅನನ್ಯ : ಈಗ ನಾವು ಉಡುಗೊರೆಗಳು ಒಟ್ಟು ಎಷ್ಟು ಬಂದಿವೆ ಎಂದು ಎಣಿಸೋಣ.

ಕ್ರ.ಸಂ	ಉಡುಗೊರೆಗಳು	ಸಂಖ್ಯೆ
1	ಗೊಂಬೆಗಳು	2
2	ಕ್ರಯಾನ್ಸ್	10
3	ಚಾಕೊಲೇಟ್‌ಗಳು	4
4	ನೀರಿನ ಬಾಟೆಲ್‌ಗಳು	2
5	ಪೆನ್ಸಿಲ್ ಬಾಕ್ಸ್	1
6	ಪೆನ್ನುಗಳು	3
	ಒಟ್ಟು	**22**

ಚಟುವಟಿಕೆ ೩ :

ಸುಶೀಲ ಮತ್ತು ಅವಳ ತಾಯಿ ಹಣ್ಣಿನ ಅಂಗಡಿಗೆ ಹೋದರು. ಅವರು ಸೇಬುಹಣ್ಣು, ದಾಳಿಂಬೆ ಹಣ್ಣು, ಬಾಳೆಹಣ್ಣು, ಕಿತ್ತಳೆಹಣ್ಣು ಕೊಂಡರು. ಮನೆಗೆ ವಾಪಸ್ಸು ಬಂದ ಸುಶೀಲ ತನ್ನ ಕುತೂಹಲಕ್ಕೆ ಯಾವ ಹಣ್ಣು ಎಷ್ಟು ಸಂಖ್ಯೆಯಲ್ಲಿದೆ ಎಂದು ಎಣಿಸಿ ಪಟ್ಟಿ ಮಾಡಲು ಬಯಸಿದಳು. ಈಗ ನೀನು ಸುಶೀಲಳಿಗೆ ಕೋಷ್ಟಕ ತುಂಬಲು ಸಹಾಯ ಮಾಡುವಿಯಾ?



©KTBS NOT TO BE REPUBLISHED

ಕ್ರ.ಸಂ	ಹಣ್ಣುಗಳು	ಸಂಖ್ಯೆ
1	ಸೇಬುಹಣ್ಣು	8
2	ದಾಳಿಂಬೆಹಣ್ಣು	
3	ಬಾಳೆಹಣ್ಣು	
4	ಕಿತ್ತಳೆಹಣ್ಣು	
ಒಟ್ಟು ಹಣ್ಣುಗಳ ಸಂಖ್ಯೆ		

ಚಟುವಟಿಕೆ 4 :

ಕೆಳಗೆ ಕೊಟ್ಟಿರುವ ಪರಿಕರಗಳನ್ನು ಪ್ರತ್ಯೇಕವಾಗಿ ಬಳಸಿ ಬಕೆಟ್‌ನಲ್ಲಿ ನೀರು ತುಂಬು. ಎಷ್ಟು ಬಾರಿ ಬಳಸಿದೆ ಎಂದು ಎಣಿಸಿ, ಸಂಖ್ಯೆಯನ್ನು ಬರೆ.



©KTBS NOT TO BE REPUBLISHED

ಕ್ರ.ಸಂ	ಪರಿಕರಗಳು	ಬಕೆಟ್ ತುಂಬಲು ಬೇಕಾದ ನೀರು
1		_____ ಮಗ್‌ಗಳು
2		_____ ಸೀಸೆಗಳು
3		_____ ಪಾತ್ರೆಗಳು

ಚಟುವಟಿಕೆ ೫ :

ನಿನ್ನ ತರಗತಿ ಕೊಠಡಿಯ ಅಗಲವನ್ನು ಗೇಣು, ಮೊಳ, ಪಾದಗಳಿಂದ ಅಳೆದು, ಎಷ್ಟು ಬಾರಿ ಅಳೆದಿದೆ ಎಂದು ಎಣಿಸಿ ಬರೆ.

ಅಳತೆಯ ಮಾನ	ಕೊಠಡಿಯ ಅಗಲ
ಗೇಣು	_____ ಗೇಣುಗಳು
ಮೊಳ	_____ ಮೊಳಗಳು
ಪಾದ	_____ ಪಾದಗಳು

ಚಟುವಟಿಕೆ ೬ :

ಅರುಣಳ ಬಳಿ ವಿವಿಧ ರೀತಿಯ ಬಣ್ಣದ ಹೂವುಗಳಿರುವ ಚಾರ್ಟು ಇದೆ. ಪ್ರತಿ ಹೂಗಳ ಸಂಖ್ಯೆಗಳನ್ನು ಕೋಷ್ಟಕದಲ್ಲಿ ತುಂಬಿಸಿ.



©KTBS NOT TO BE REPUBLISHED

ಕ್ರ.ಸಂ	ಹೂವುಗಳು	ಸಂಖ್ಯೆ
1	ಗುಲಾಬಿ ಹೂವು 	
2	ಸೂರ್ಯಕಾಂತಿ ಹೂವು 	
3	ದಾಸವಾಳದ ಹೂವು 	
4	ತಾವರೆ ಹೂವು 	
ಒಟ್ಟು ಹೂವುಗಳ ಸಂಖ್ಯೆ		

©KTBS NOT TO BE REPUBLISHED

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು :

1) ಯಾವ ಹೂವುಗಳು ಹೆಚ್ಚಿನ ಸಂಖ್ಯೆಯಲ್ಲಿವೆ?

2) ಯಾವ ಹೂವುಗಳು ಕಡಿಮೆ ಸಂಖ್ಯೆಯಲ್ಲಿವೆ?


3) ಗುಲಾಬಿ ಹೂವುಗಳ ಸಂಖ್ಯೆಯನ್ನು ಸೂರ್ಯಕಾಂತಿ ಹೂವುಗಳ ಸಂಖ್ಯೆಯೊಂದಿಗೆ ಹೋಲಿಸಿದಾಗ

- ಯಾವ ಹೂವುಗಳು ಹೆಚ್ಚಿನ ಸಂಖ್ಯೆಯಲ್ಲಿವೆ? _____

- ಯಾವ ಹೂವುಗಳು ಕಡಿಮೆ ಸಂಖ್ಯೆಯಲ್ಲಿವೆ? _____

ಚಟುವಟಿಕೆ 7 :

ಈ ಚಿತ್ರ ಗಮನಿಸು. ಇಲ್ಲಿ ವಿವಿಧ ಗಾತ್ರದ ಚೆಂಡುಗಳಿವೆ, ಅವುಗಳಿಗೆ ಸಂಬಂಧಿಸಿದಂತೆ ಕೊಟ್ಟಿರುವ ಪಟ್ಟಿಯನ್ನು ಪೂರ್ಣಗೊಳಿಸು.



ವಸ್ತುಗಳು	ಎಷ್ಟಿವೆ? ಸಂಖ್ಯೆ ಬರೆ
	
	
	
ಒಟ್ಟು	

NOT TO BE REPUBLISHED @KTBS

ಅ) ಅತಿ ಹೆಚ್ಚಿರುವ ಚೆಂಡುಗಳು ಯಾವುವು? ✓ ಗುರುತುಹಾಕು.







ಆ) ಅತಿ ಕಡಿಮೆಯಿರುವ ಚೆಂಡುಗಳು ಯಾವುವು? ✓ ಗುರುತುಹಾಕು.





ಚಟುವಟಿಕೆ ೮ :

ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿರುವ ಮಾಹಿತಿಯನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸು.

ಅಚ್ಚು ಮೆಚ್ಚಿನ ಚಟುವಟಿಕೆಗಳು :

ವಿದ್ಯಾರ್ಥಿಗಳು	ಸಂಗೀತ	ನೃತ್ಯ	ಓದು	ಚಿತ್ರ ಮತ್ತು ಕ್ರಾಫ್ಟ್	ಆಟಗಳು
ಹುಡುಗಿಯರು	12	20	9	34	16
ಹುಡುಗರು	6	8	11	25	40
ಒಟ್ಟು	**18**	**28**	**20**	**59**	**56**

1. ಹುಡುಗಿಯರ ಅಚ್ಚುಮೆಚ್ಚಿನ ಚಟುವಟಿಕೆ ಯಾವುದು?
   _____
2. ಹುಡುಗರ ಅಚ್ಚುಮೆಚ್ಚಿನ ಚಟುವಟಿಕೆ ಯಾವುದು?
   _____
3. ಒಟ್ಟಾರೆ ಎಲ್ಲಾ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಚಟುವಟಿಕೆ ಯಾವುದು?
   _____
4. ಹುಡುಗರು ಅತೀ ಕಡಿಮೆ ಇಷ್ಟಪಟ್ಟಿರುವ ಚಟುವಟಿಕೆ ಯಾವುದು?
   _____
5. ಹುಡುಗರು ಮತ್ತು ಹುಡುಗಿಯರಲ್ಲಿ ನೃತ್ಯವನ್ನು ಕಡಿಮೆ ಇಷ್ಟಪಟ್ಟಿರುವವರು ಯಾರು?
   _____

ದತ್ತಾಂಶ ಮಾಹಿತಿಯನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಬರೆಯುವುದಕ್ಕೆ **'ಕೋಷ್ಟಕ'** ಎನ್ನುತ್ತೇವೆ.

NOT TO BE REPUBLISHED @KTBS

ಪಾಠ–13

ವಿನ್ಯಾಸಗಳು


Z8B7X6

ಈ ಪಾಠವನ್ನು ಕಲಿತ ನಂತರ ನೀನು,


- ಆಕಾರ ಮತ್ತು ಸಂಖ್ಯೆಗಳನ್ನು ಕ್ರಮಬದ್ಧವಾಗಿ ಜೋಡಿಸಿ, ವಿನ್ಯಾಸಗಳನ್ನು ವಿಸ್ತಾರಗೊಳಿಸುವೆ.
- ಸಂಖ್ಯೆಗಳನ್ನು ಬೇರೆ ಬೇರೆ ಕ್ರಮದಲ್ಲಿ ವಿಂಗಡಿಸುವ ಮೂಲಕ ವಿನ್ಯಾಸಗಳನ್ನು ರೂಪಿಸುವೆ
- ಅಚ್ಚು ಒತ್ತುವ ಮೂಲಕ ಹೆಬ್ಬೆರಳು, ಎಲೆಗಳು ಹಾಗೂ ತರಕಾರಿ ಹೋಳುಗಳಿಂದ ಚಿತ್ರ ವಿನ್ಯಾಸ ರೂಪಿಸುವೆ.
- ಎರಡು ಆಯಾಮಗಳುಳ್ಳ ಆಕೃತಿಗಳನ್ನು ಅಂಟಿಸುವುದರ ಮೂಲಕ ಹೊಸ ಮಾದರಿಗಳನ್ನು ರಚಿಸುವೆ.

© DSERT NOT TO BE REPUBLISHED

ಚಿನ್ನಿ ಮತ್ತು ಗಿನ್ನಿ ಮನೆಗೆ ಹೋಗುತ್ತಿರುವಾಗ, ಅವರು ಕೆಲವು ಜನರು ನೆಲಹಾಸಿನ (Tiles) ದಾರಿಯನ್ನು ನಿರ್ಮಿಸುತ್ತಿರುವುದನ್ನು ನೋಡಿದರು. ಬೇರೆ ಬೇರೆ ಬಣ್ಣ ಮತ್ತು ಚಿತ್ರಗಳಿಂದ ಕೂಡಿದ ನೆಲಹಾಸುಗಳನ್ನು ಬಳಸಲಾಗಿತ್ತು. ಅವರು ನೋಡಿರುವ ನೆಲ ಹಾಸುಗಳುಹೀಗಿತ್ತು.




ಸಂಜೆಯ ಹೊತ್ತಿನಲ್ಲಿ ಅವರು ಉದ್ಯಾನವನದಲ್ಲಿ ಆಡುತ್ತಿರುವಾಗ ಆವರಣದ ಗೋಡೆಯ ಮೇಲಿದ್ದ ಕಬ್ಬಿಣದ ಕಂಬಿಗಳ ಚೌಕಟ್ಟನ್ನು ನೋಡಿದರು. ಅದು ಈ ರೀತಿ ಇತ್ತು.



ಇದೇ ರೀತಿಯ ಅನೇಕ ವಿನ್ಯಾಸಗಳನ್ನು ನಾವು ನಮ್ಮ ಸುತ್ತಲೂ ನೋಡಬಹುದು. ಉದಾ: ಹೆಂಚುಗಳು, ಬಟ್ಟೆಗಳು, ಸೀರೆಗಳು ಇತ್ಯಾದಿ.

ಇಲಿಯು  ಚಿನ್ನಿಯ ತಾಯಿಯ ಶಾಲಿನ ಒಂದು ಭಾಗವನ್ನು ತಿಂದಿದೆ.

ಚಿತ್ರವನ್ನು ನೋಡಿ, ಸರಿಯಾದ ವಿನ್ಯಾಸವನ್ನು ಹೊಂದಿರುವ ತುಂಡನ್ನು ಹೊಂದಿಸಿ ಜೋಡಿಸಲು ಚಿನ್ನಿಗೆ ಸಹಾಯ ಮಾಡು.




ಕ್ರಮ ಬದ್ಧವಾಗಿ ಜೋಡಿಸಿರುವ ಚಿತ್ರ ಅಥವಾ ಬಣ್ಣ ಅಥವಾ ಆಕಾರಗಳೇ ವಿನ್ಯಾಸಗಳು.

ನಾವು ನಮ್ಮ ಸುತ್ತಲೂ ಅನೇಕ ವಿನ್ಯಾಸಗಳನ್ನು ಕಾಣಬಹುದು.

ಹೊದಿಕೆ




ಸೀರೆ



© KTBS NOT TO BE REPUBLISHED

ನೆಲ



ನೆಲಹಾಸು (Tile)



ಚಟುವಟಿಕೆ 1 :

ನಿನ್ನ ಸುತ್ತಲಿನ ಪರಿಸರದಲ್ಲಿ ನೀನು ನೋಡಿರುವ, ವಿನ್ಯಾಸಗಳನ್ನು ಹೊಂದಿರುವ 3 ವಸ್ತುಗಳನ್ನು ಪಟ್ಟಿ ಮಾಡು.

1.

2.

3.


ಚಟುವಟಿಕೆ 2 :

ಸಾಮಾನ್ಯವಾಗಿ ದೊರಕುವ, ವಿನ್ಯಾಸಗಳನ್ನು ಹೊಂದಿರುವ ಕೆಲವು ವಸ್ತುಗಳನ್ನು ಸಂಗ್ರಹಿಸು.

@KTBS NOT TO BE REPUBLISHED

ವಿನ್ಯಾಸ ವಿಸ್ತರಣೆ

ನಸೀಮನು ಮಣಿ ಸರವನ್ನು ತಯಾರಿಸುತ್ತಿದ್ದಾನೆ. ನಿನ್ನ ಪ್ರಕಾರ, ನಸೀಮನು ಮುಂದೆ ಜೋಡಿಸಲಿರುವ ಮಣಿ ಯಾವುದು? ಆ ಮಣಿಗೆ ಬಣ್ಣ ಹಾಕು.




ಒಂದು ನಿರ್ದಿಷ್ಟ ವಿನ್ಯಾಸ ಬರುವ ಹಾಗೆ, ಉಳಿದಿರುವ ಚೌಕಗಳಿಗೆ ಬಣ್ಣ ಹಾಕು.




ಆಕಾರಗಳು ಮತ್ತು ವಿನ್ಯಾಸಗಳು






ಇದು ಆಯತಾಕಾರ. ಇದಕ್ಕೆ ಬಣ್ಣ ಹಚ್ಚು.



ಇದು ದುಂಡನೆಯ ಆಕಾರದಲ್ಲಿದ್ದು, ಇದನ್ನು 'ವೃತ್ತ' ಎಂದು ಕರೆಯುತ್ತಾರೆ. ಇದಕ್ಕೆ ಬಣ್ಣ ಹಚ್ಚು.


ಕೊಟ್ಟಿರುವ ಚಿತ್ರವನ್ನು ಗಮನಿಸು. ಆಯತ ಹಾಗೂ ವೃತ್ತಗಳಿಗೆ ಬೇರೆ ಬೇರೆ ಬಣ್ಣಗಳನ್ನು ಹಚ್ಚು.



@KSEEBS NOT TO BE REPUBLISHED


ಚುಕ್ಕೆಗಳನ್ನು ಸೇರಿಸು.

ಚುಕ್ಕೆಗಳನ್ನು ಪೆನ್ಸಿಲ್‌ನಿಂದ ಸೇರಿಸಿ, ಚಿತ್ರವನ್ನು ಪೂರ್ಣಗೊಳಿಸು. ನಂತರ ಚಿತ್ರದಲ್ಲಿ ಸೂಚಿಸಿರುವ ಬಣ್ಣ ಹಚ್ಚು.



1. ಹಳದಿ ಬಣ್ಣ
2. ಕಿತ್ತಳೆ ಬಣ್ಣ
3. ಹಸಿರು ಬಣ್ಣ
4. ಕೆಂಪು ಬಣ್ಣ


1. ಕೆಂಪು ಬಣ್ಣ
2. ಹಳದಿ ಬಣ್ಣ
3. ಕಿತ್ತಳೆ ಬಣ್ಣ
4. ನೀಲಿ ಬಣ್ಣ
5. ಗುಲಾಬಿ ಬಣ್ಣ
6. ಹಸಿರು ಬಣ್ಣ



1. ಗುಲಾಬಿ ಬಣ್ಣ
2. ಕೆಂಪು ಬಣ್ಣ
3. ನೀಲಿ ಬಣ್ಣ

@KTBS NOT TO BE REPUBLISHED

ಈ ಕೆಳಗೆ ಕೊಟ್ಟಿರುವ ವಿನ್ಯಾಸಗಳನ್ನು ಗಮನಿಸು.



ಮೇಲಿನ ವಿನ್ಯಾಸಗಳನ್ನು ಗಮನಿಸಿದಾಗ ತಿಳಿಯುವುದೇನೆಂದರೆ,

* ವಿನ್ಯಾಸದಲ್ಲಿ ಒಂದೇ ಆಕಾರವು ನಿರಂತರವಾಗಿ ಪುನರಾವರ್ತನೆಗೊಳ್ಳುತ್ತದೆ.


* ಮೊದಲ ಚಿತ್ರದಲ್ಲಿ '$\wedge$' ಆಕಾರವು ಪುನರಾವರ್ತನೆಗೊಂಡಿದೆ.

ಎರಡನೇ ಚಿತ್ರದಲ್ಲಿ O ಮತ್ತು Δ ದ ನಂತರ ಅದೇ ಆಕಾರಗಳು ಪುನರಾವರ್ತನೆಗೊಂಡಿವೆ. ಯಾವುದೇ ವಿನ್ಯಾಸದಲ್ಲಿ, ಒಂದೇ ಆಕಾರಗಳು ನಿರಂತರವಾಗಿ ಪುನರಾವರ್ತನೆ ಗೊಳ್ಳುತ್ತವೆ.

ವ್ಯವಸ್ಥಿತ ಅಂತರದಲ್ಲಿ ಒಂದೇ ಆಕಾರಗಳು ಪುನರಾವರ್ತಿಸಲ್ಪಟ್ಟಿರುವುದಕ್ಕೆ 'ವಿನ್ಯಾಸ' ಎಂದು ಹೆಸರು.

ಉದಾಹರಣೆ:

ಒಂದು ನಿರ್ದಿಷ್ಟ ವಿನ್ಯಾಸ ಬರುವಂತೆ, ತೋರಿಸಿರುವ ಉದಾಹರಣೆಯಂತೆ ಈ ಕೆಳಗಿನವುಗಳನ್ನು ಪೂರ್ಣಗೊಳಿಸು.




@KTBS NOT TO BE REPUBLISHED




1.

2.

ಮುಂದೇನು ಬರುತ್ತದೆ ?




ಈ ಕೆಳಗಿನ ವಿನ್ಯಾಸಗಳನ್ನು ನೋಡಿ, ಬಿಟ್ಟು ಹೋಗಿರುವ ಆಕಾರಗಳನ್ನು ಚಿತ್ರಿಸು.


1.	
2.	
3.	

NOT TO BE REPUBLISHED @KTBS

,


4. 


5. 

6. 

7. 

ಈ ಕೆಳಗಿನ ವಿನ್ಯಾಸಗಳನ್ನು ನೋಡಿ, ಬಿಟ್ಟು ಹೋಗಿರುವ ಚಿತ್ರಗಳನ್ನು ಬಿಡಿಸು. ನಂತರ ಬಣ್ಣ ಹಾಕು.

1. 


2. 

3. 


4. 

@KTBS NOT TO BE REPUBLISHED


ಬೆಂಕಿಕಡ್ಡಿಗಳನ್ನು ಬಳಸಿ ವಿನ್ಯಾಸಗಳನ್ನು ರಚಿಸು.

1.  , _____ _____ _____ , _____

2.  , _____ _____ , _____ _____


3.  , _____ _____ , _____

ಈ ಕೆಳಗಿನವುಗಳನ್ನು ಪ್ರಯತ್ನಿಸು.

1.  _____ _____ _____

2. 

3.  _____ _____

4.  , _____

5.  , _____ _____


6.  , _____ _____ _____ _____

©KTBS NOT TO BE REPUBLISHED

ನೀನೆ ಮಾಡು

ಚುಕ್ಕೆ ಚೌಕಟ್ಟಿನ ಮೇಲೆ, ವಕ್ರ ಗೆರೆಗಳಿಂದ ಎರಡು ಅಥವಾ ಹೆಚ್ಚು ಚುಕ್ಕೆಗಳನ್ನು ಸೇರಿಸು. ರಂಗೋಲಿಯಂತಹ ಚಿತ್ರ ವಿನ್ಯಾಸ ರಚಿಸು.

ವಿನ್ಯಾಸಗಳು




@KTBS
NOT TO BE REPUBLISHED

ನೀನೆ ಮಾಡು


ಚುಕ್ಕೆ ಚೌಕಟ್ಟುಗಳನ್ನು ಬಳಸಿ, ನಿನಗಿಷ್ಟವಾದ ಚಿತ್ರ ಅಥವಾ ವಿನ್ಯಾಸಗಳನ್ನು ಬಿಡಿಸು.


ಯೋಜನ ಕಾರ್ಯ

ಬೇರೆ ಬೇರೆ ಬಣ್ಣದ ನಾಲ್ಕು ಕ್ರಾಫ್ಟ್ ಹಾಳೆಗಳನ್ನು ತೆಗೆದುಕೊ. ಹಾಳೆಗಳನ್ನು ಈ ಕೆಳಗಿನ ಆಕಾರಗಳಲ್ಲಿ ಕತ್ತರಿಸು ಮತ್ತು ಬೇರೆ ಬೇರೆ ವಿನ್ಯಾಸಗಳನ್ನು ರಚಿಸು.



ಈ ಕೆಳಗಿನ ವಿನ್ಯಾಸಗಳನ್ನು ಗಮನಿಸು.


.....


.....

ಸಂಖ್ಯೆಗಳ ವಿನ್ಯಾಸ

ಈ ವಿನ್ಯಾಸಗಳನ್ನು ಸಂಖ್ಯೆಗಳಿಂದ ಹೀಗೆ ತೋರಿಸಬಹುದಾಗಿದೆ.

1, 2, 3, 4


2, 4, 6, 8

ನಾವೀಗ ಸಂಖ್ಯೆಗಳನ್ನು ಗಮನಿಸೋಣ.

1, 2, 3, 4, 5, 6, 7, 8, 9, 10


,.....

2, 4, 6, 8, 10, 12, 14, 16, 18, 20


,.....

100, 90, 80, 70, 60, 50, 40, 30, 20, 10

ಇಲ್ಲಿರುವ ಪ್ರತಿಯೊಂದು ಸಂಖ್ಯೆಗಳ ಗುಂಪಿನಲ್ಲೂ ಒಂದು ನಿರ್ದಿಷ್ಟ ನಿಯಮವನ್ನು ನಾವು ಕಾಣಬಹುದು.

@KTBS NOT TO BE REPUBLISHED

* 1, 2, 3, 4, 5, 6, 7, 8, 9, 10 ಈ ಗುಂಪು 1ರಿಂದ ಪ್ರಾರಂಭವಾಗಿದ್ದು, ಮುಂದಿನ ಎಲ್ಲಾ ಸಂಖ್ಯೆಗಳು ಒಂದೊಂದು ಹೆಚ್ಚಾಗುತ್ತಾ ಸಾಗಿವೆ.

* 2, 4, 6, 8, 10, 12, 14, 16, 18, 20 ಈ ಗುಂಪು 2ರಿಂದ ಪ್ರಾರಂಭವಾಗಿದ್ದು, ಮುಂದಿನ ಎಲ್ಲಾ ಸಂಖ್ಯೆಗಳು ಎರಡೆರಡು ಹೆಚ್ಚಾಗುತ್ತಾ ಸಾಗಿವೆ.

* 100, 90, 80, 70, 60, 50, 40, 30, 20, 10 ಈ ಗುಂಪು 100ರಿಂದ ಪ್ರಾರಂಭವಾಗಿದ್ದು, ಮುಂದಿನ ಎಲ್ಲಾ ಸಂಖ್ಯೆಗಳು ಹತ್ತರಷ್ಟು ಕಡಿಮೆಯಾಗುತ್ತಾ ಸಾಗಿವೆ.

ಸಂಖ್ಯೆಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಬರೆಯುವ ಈ ವಿಧಾನವನ್ನು "ಸಂಖ್ಯಾ ವಿನ್ಯಾಸ" ಎನ್ನುವರು.

ಸಂಖ್ಯೆಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಜೋಡಿಸುವುದೇ "ಸಂಖ್ಯಾ ವಿನ್ಯಾಸ".




ಉದಾರಣೆ :

* 2, 4, 6, 8, 10, 12, 14, 16 **ನಿಯಮ :** 2 ನ್ನು ಕೂಡಿಸಿದೆ

ವಿನ್ಯಾಸವನ್ನು ನೋಡಿ ಮುಂದಿನ ಸಂಖ್ಯೆಗಳನ್ನು ಊಹಿಸಿ ಬರೆ. ನಿಯಮವನ್ನು ಖಾಲಿ ಬಿಟ್ಟ ಸ್ಥಳದಲ್ಲಿ ಬರೆ.

@KTBS NOT TO BE REPUBLISHED

		ನಿಯಮ
1.	15, 20, 25, 30, 35, ____ , ____ , ____	
2.	15, 13, 11, 9 ____ , ____ , ____	
3.	10, 12, ◯, 16, ◯, 20, ◯, 24	
4.	48, 44, 40, 36, ◯, 28, ◯, ◯	
5.	22, 32, ◯, 52, ◯, ◯, 82, ◯	

6.		
7.		
8.		
9.		
10.		
11.		
12.		
13.		










NOT TO BE @KTBS REPUBLISHED

ಚಟುವಟಿಕೆ :

1, 3, 5, 7, 9 ರಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ಹಳದಿ ಬಣ್ಣವನ್ನು, 0, 2, 4, 6, 8 ರಿಂದ ಕೊನೆಗೊಳ್ಳುವ ಸಂಖ್ಯೆಗಳಿಗೆ ನೀಲಿ ಬಣ್ಣವನ್ನು ಹಚ್ಚು. ನಂತರ ವಿನ್ಯಾಸವನ್ನು ನೋಡಿ ಆನಂದಿಸು.

1	2	3	4	5
6	7	8	9	10
11	12	13	14	15
16	17	18	19	20
21	22	23	24	25


ಈ ಕೆಳಗಿನ ಪ್ರತಿಯೊಂದು ತ್ರಿಭುಜವನ್ನು ಪೂರ್ಣಗೊಳಿಸು.


1.			
2.			
3.			


@KTBS NOT TO BE REPUBLISHED


ಇವುಗಳನ್ನು ಮಾಡು


ವಿನ್ಯಾಸವನ್ನು ಅನುಸರಿಸಿ, ಸಾಲುಗಳನ್ನು ಪೂರ್ಣಗೊಳಿಸು.

1. 

2. 

3. 

4. 

5. 

© KTBS NOT TO BE REPUBLISHED

ಈ ವಿನ್ಯಾಸವನ್ನು ಗಮನಿಸು.

1 = 1

2 = 1 + 1

3 = 1 + 1 + 1

4 = 1 + 2 + 1

5 = 1 + 3 + 1

6 = 1 + 4 + 1

7 = 1 + 5 + 1

8 = 1 + 6 + 1

9 = 1 + 7 + 1

10 = 1 + 8 + 1

ಇಲ್ಲಿ 2 ರಿಂದ 10 ರವರೆಗಿನ ಸಂಖ್ಯೆಗಳು ಎರಡು ಅಥವಾ ಮೂರು ಅಂಕಿಗಳ ಮೊತ್ತವನ್ನು ತೋರಿಸುತ್ತಿವೆ.

ಅಂದರೆ 2ನ್ನು 1 + 1 ಎಂದು ವಿಂಗಡಿಸಲಾಗಿದೆ.


ಅದೇ ರೀತಿ 3ನ್ನು 1 + 1 + 1 ಎಂದು ವಿಂಗಡಿಸಲಾಗಿದೆ.

ವಿನ್ಯಾಸ 1 :

1 =

2 =

3 =



© KTBS NOT TO BE REPUBLISHED

ವಿನ್ಯಾಸ 2 :

$4 = 1 + 2 + 1$

$5 = 1 + 3 + 1$

$6 = 1 + 4 + 1$

$7 = 1 + 5 + 1$

$8 = 1 + 6 + 1$


$9 = 1 + 7 + 1$

$10 = 1 + 8 + 1$

ವಿನ್ಯಾಸ 3

ಇಲ್ಲಿರುವ ವಿಂಗಡಣೆಯಲ್ಲಿ, ಮೊದಲ ಮತ್ತು ಮೂರನೇ ಸಂಖ್ಯೆ ಒಂದೇ ಆಗಿದ್ದು ಮಧ್ಯದ ಸಂಖ್ಯೆ ಪ್ರತಿಬಾರಿ 1 ಹೆಚ್ಚಳವಾಗಿದೆ.

ಈಗ ಒಂದು ಸಂಖ್ಯೆಯನ್ನು ಬೇರೆ ಬೇರೆ ಕ್ರಮದಲ್ಲಿ ವಿಂಗಡಿಸಿ ವಿನ್ಯಾಸ ಗೊಳಿಸುವುದು ಹೇಗೆ ಎಂಬುದನ್ನು ನೋಡೋಣ.




ಇಲ್ಲಿ 16ನ್ನು ನಾಲ್ಕು ವಿವಿಧ ನಮೂನೆಗಳಲ್ಲಿ ಬರೆಯಲಾಗಿದೆ. ಈ ನಮೂನೆಗಳಿಂದ ಒಂದು ಸಂಖ್ಯಾ ವಿನ್ಯಾಸ ರಚನೆಯಾಗಿದೆ.


@KTBS NOT TO BE REPUBLISHED

ಈ ಕೆಳಗಿನ ನಮೂನೆಗಳನ್ನು ಪೂರ್ಣಗೊಳಿಸು.


1)



2)



3)



©KTBS NOT TO BE REPUBLISHED

ಉದಾಹರಣೆಯಲ್ಲಿ ತೋರಿಸಿರುವಂತೆ, ಬಿಟ್ಟಸ್ಥಳಗಳನ್ನು ತುಂಬಿ, ಸಂಖ್ಯಾ ವಿನ್ಯಾಸವನ್ನು ಗಮನಿಸು:

ಉದಾಹರಣೆ :

1)	18 =	9+9	8+10	7+__	__+12	__+ __
2)	12 =	20-8	18-6	16- __	__ -2	__- __
3)	14 =	10+4	9+ __	__+ 6	__+ __	6+ __
4)	10 =	20-10	30 -__	__-30	50- __	__- __

ಮುದ್ರೆಯೊತ್ತುವ ಮೂಲಕ ಹೆಬ್ಬೆಟ್ಟು, ಎಲೆಗಳು ಹಾಗೂ ತರಕಾರಿಗಳಿಂದ ಚಿತ್ರ ವಿನ್ಯಾಸ

ಚಟುವಟಿಕೆ 1 : ತರಕಾರಿಗಳಿಂದ ಚಿತ್ರ.

ಬೇಕಾದ ಸಾಮಗ್ರಿಗಳು :

ಅ) ಈರುಳ್ಳಿ, ಹಾಗಲಕಾಯಿ, ತೊಂಡೆಕಾಯಿ, ಸೋರೆಕಾಯಿ, ಕ್ಯಾರೆಟ್, ಬೆಂಡೆಕಾಯಿ.

ಆ) (Water Colour) ಬಣ್ಣಗಳು–ಕೆಂಪು, ಹಸಿರು, ನೀಲಿ, ಕಿತ್ತಳೆ ಇತ್ಯಾದಿ.

ವಿಧಾನ :




1) ಈರುಳ್ಳಿಯನ್ನು ನೇರವಾಗಿ ಕತ್ತರಿಸು.

2) ಹಾಗಲಕಾಯಿ, ತೊಂಡೆಕಾಯಿ, ಸೋರೆಕಾಯಿ, ಕ್ಯಾರೆಟ್ ಹಾಗೂ ಬೆಂಡೆಕಾಯಿಯನ್ನು ಅಡ್ಡವಾಗಿ ಕತ್ತರಿಸು.



©KTBS NOT TO BE REPUBLISHED

ಅಡ್ಡವಾಗಿ ಕತ್ತರಿಸಿದ ತರಕಾರಿಗಳ ಚಿತ್ರ.

 ಕ್ಯಾರೆಟ್	 ಹಾಗಲಕಾಯಿ	 ತೊಂಡೆಕಾಯಿ
 ಬೆಂಡೆಕಾಯಿ	 ಈರುಳ್ಳಿ	 ಹೀರೆಕಾಯಿ

ಈ ತರಕಾರಿಗಳ ಕತ್ತರಿಸಿದ ಭಾಗಗಳನ್ನು ವಿವಿಧ ಬಣ್ಣಗಳಲ್ಲಿ ಅದ್ದಿ, ಕೊಟ್ಟಿರುವ ಜಾಗದಲ್ಲಿ ಅಚ್ಚುಹಾಕು.



@KTBS NOT TO BE REPUBLISHED

ಚಟುವಟಿಕೆ 2

ಬೇಕಾದ ಸಾಮಗ್ರಿಗಳು :

ಅ) ಯಾವುದೇ ಸಸ್ಯದ ಸಾಮಾನ್ಯಗಾತ್ರದ ಎಲೆಗಳು.

ಆ) ತರಕಾರಿ – ಹಾಗಲಕಾಯಿ.

ಇ) (Water Colour) ಬಣ್ಣಗಳು – ಹಸಿರು, ಕೆಂಪು, ಗುಲಾಬಿ


ವಿಧಾನ :

1. ಎಲೆಯ ಮೇಲ್ಭಾಗವನ್ನು ಸ್ವಚ್ಛಗೊಳಿಸು.
2. ಎಲೆಯ ಒಳ ಭಾಗಕ್ಕೆ ಹಸಿರು ಬಣ್ಣವನ್ನು ಹಚ್ಚು.
3. ಈ ಕೆಳಗೆ ತೋರಿಸಿರುವಂತೆ ಬಣ್ಣಹಚ್ಚಿರುವ ಎಲೆಯನ್ನು ಬಿಳಿಹಾಳೆ ಮೇಲೆ ಅಚ್ಚು ಹಾಕಿ, ವಿವಿಧ ವಿನ್ಯಾಸ ರಚಿಸು.

ಉದಾಹರಣೆ 1 :



ಉದಾಹರಣೆ 2 :




ಉದಾಹರಣೆ 3 :



@KTBS NOT TO BE REPUBLISHED

ಎಲೆ ಮತ್ತು ಹಾಗಲಕಾಯಿಯನ್ನು ಬಳಸಿ, ಈ ಕೆಳಗಿನಂತೆ ಚಿತ್ರ ವಿನ್ಯಾಸ ರಚಿಸು.

ಉದಾಹರಣೆ 1.



ಉದಾಹರಣೆ2.



© KTBS NOT TO BE REPUBLISHED

ಚಟುವಟಿಕೆ 3 :

ಕೆತ್ತಿದ ಒತ್ತು ಚಿತ್ರ ವಿನ್ಯಾಸ ರಚಿಸು.

ಬೇಕಾದ ಸಾಮಗ್ರಿಗಳು

ಕ್ಯಾರೆಟ್, ವಿವಿಧ ಬಣ್ಣಗಳು, ಕಟ್ಟರ್/ಚಾಕು.

ವಿಧಾನ :

1) ಅಡ್ಡವಾಗಿ ಕತ್ತರಿಸಿದ ಕ್ಯಾರೆಟ್ ತುಂಡುಗಳನ್ನು ತೆಗೆದುಕೊ.
2) ಅವುಗಳ ಮೇಲ್ಮೈ ಮೇಲೆ +, – ಮತ್ತು × ಚಿಹ್ನೆಗಳನ್ನು ಕೊರೆ.
3) ಚಿಹ್ನೆಗಳನ್ನು ಕೊರೆದಿರುವ ಮೇಲ್ಮೈ ಭಾಗವನ್ನು ವಿವಿಧ ಬಣ್ಣಗಳಲ್ಲಿ ಅದ್ದಿ, ಬಿಳಿಹಾಳೆಯ ಮೇಲೆ ಅಚ್ಚು ಹಾಕಿ, ವಿನ್ಯಾಸ ರಚಿಸು.



ಚಟುವಟಿಕೆ 4 :

ಹೆಬ್ಬೆಟ್ಟಿನ ಗುರುತು ವಿನ್ಯಾಸ

ಬೇಕಾದ ಸಾಮಗ್ರಿಗಳು : ವಿವಿಧ ಬಣ್ಣಗಳು, ಕಡ್ಡಿಗಳು.

ವಿಧಾನ :

1. ನಿನ್ನ ಹೆಬ್ಬೆರಳಿನ ಒಳಭಾಗಕ್ಕೆ ಬಣ್ಣ ಹಚ್ಚು.
2. ಬಿಳಿ ಹಾಳೆಯ ಮೇಲೆ ಹೆಬ್ಬೆಟ್ಟಿನ ಗುರುತು ಮಾಡು.
3. ಹೆಬ್ಬೆಟ್ಟಿನ ಗುರುತುಗಳಿಗೆ ಕಡ್ಡಿಯನ್ನು ಬಳಸಿ ಸೂಕ್ತ ಚಿತ್ರವನ್ನು ರಚಿಸು.
   ಉದಾ : ಹಕ್ಕಿಗಳು, ಮೀನು ಇತ್ಯಾದಿ.



©KTBS NOT TO BE REPUBLISHED

ಚಟುವಟಿಕೆ ೫ : ಅನುಕ್ರಮ ಒತ್ತು ಚಿತ್ರ

ಬೇಕಾದ ಸಾಮಗ್ರಿಗಳು :

ಕ್ಯಾರೆಟ್, ಬೆಂಡೆಕಾಯಿ, ಹಾಗಲಕಾಯಿ, ಸೋರೆಕಾಯಿ ಹಾಗೂ ತೊಂಡೆಕಾಯಿಯ ಕತ್ತರಿಸಿದ ತುಂಡುಗಳು, ವಿವಿಧ ಬಣ್ಣಗಳು.


ವಿಧಾನ :

ಬೇರೆ ಬೇರೆ ತರಕಾರಿಯ ತುಂಡುಗಳನ್ನು ವಿವಿಧ ಬಣ್ಣಗಳಲ್ಲಿ ಅದ್ದಿ, ಅನುಕ್ರಮ ಒತ್ತು ಚಿತ್ರಗಳನ್ನು ಉದಾಹರಣೆಯಲ್ಲಿ ತೋರಿಸಿರುವಂತೆ ಕಾಗದದ ಮೇಲೆ ಮೂಡಿಸು.

1)




2)




3)



4)



5)




ಆಕೃತಿಗಳಿಂದ ಹೊಸ ಮಾದರಿ ರಚನೆ

ಚಟುವಟಿಕೆ 1 :

ಒಂದೇ ಅಳತೆಯ ವಿವಿಧ ಬಣ್ಣದ 8 ತ್ರಿಭುಜದ ತುಂಡುಗಳನ್ನು ತೆಗೆದುಕೊಂಡು ಅವುಗಳಲ್ಲಿ ಯಾವುದಾದರೂ 3 ಬಣ್ಣದ ತ್ರಿಭುಜಗಳನ್ನು ಬಳಸಿ ವಿವಿಧ ಮಾದರಿಗಳನ್ನು ಚೌಕಾಕಾರದ ಬೋರ್ಡಿನಲ್ಲಿ ಜೋಡಿಸು.




ನೀಲಿ ಕಪ್ಪು ಹಳದಿ ಕೆಂಪು



ನೀಲಿ ಕಪ್ಪು ಹಳದಿ ಕೆಂಪು

NOT TO BE REPUBLISHED @KSEEBS


ಚೌಕಾಕಾರದ ಬೋರ್ಡು




ನೀನೂ ಕೂಡ ಈ ತ್ರಿಭುಜಗಳನ್ನು ಬಳಸಿ ಬೇರೆ ಬೇರೆ ಮಾದರಿಗಳನ್ನು ರಚಿಸಬಹುದು/ ಜೋಡಿಸಬಹುದು.

ಉದಾಹರಣೆ :


ಬೇರೆ ಬೇರೆ ಬಣ್ಣದ ತ್ರಿಭುಜ ಬಳಸಿ ನೀನೇ ಪ್ರಯತ್ನಿಸು.





ಈಗ ಮೇಜು ಅಥವಾ ನೆಲದಮೇಲೆ ಚೌಕದ ಬೋರ್ಡ್ ಬಳಸದೇ ಚಿತ್ರದಲ್ಲಿ ತೋರಿಸಿದಂತೆ ಜೋಡಿಸು.

ಮಾದರಿ 1:




ಮಾದರಿ 2:




© KTBS NOT TO BE REPUBLISHED

ಚಟುವಟಿಕೆ 2 :

ಕೆಳಗೆ ತೋರಿಸಿದಂತೆ ಬೇರೆ ಬೇರೆ ಬಣ್ಣದ ಒಂದೇ ಅಳತೆಯ ನಾಲ್ಕು ತ್ರಿಭುಜಗಳನ್ನು ಸಂಗ್ರಹಿಸು.



ಈಗ ಅವುಗಳನ್ನು ದೊಡ್ಡ ತ್ರಿಭುಜವಾಗುವಂತೆ ಜೋಡಿಸು.



@KTBS NOT TO BE REPUBLISHED

ಬೇರೆ ಮಾದರಿ ತಯಾರಿಸಲು ನೀನೇ ಪ್ರಯತ್ನಿಸು.

ಚಟುವಟಿಕೆ 3 :

ಕೊಟ್ಟಿರುವ ನಾಲ್ಕು ತ್ರಿಭುಜಾಕಾರದ ರಟ್ಟಿನ ತುಂಡುಗಳನ್ನು ಬಳಸಿ ಚೌಕ ಮತ್ತು ಆಯತದ ಆಕೃತಿಗಳನ್ನಾಗಿ ಜೋಡಿಸು.

